KAMD300002932015

Presented on : 20-04-2015
Registered on : 22-04-2015
Decided on : 15-06-2026
Duration : 11 years, 1 months, 25 days

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

## ಉಪಸ್ಥಿತರುಃ-

ಶ್ರೀಮತಿ ಹರಿಣಿ ಎಂ.ಎಸ್. ಬಿ.ಎ. ಎಲ್.ಎಲ್.ಬಿ.
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.

ದಿನಾಂಕ ***15*** ನೇ ಜೂನ್-***2026***

ಅಸಲು ದಾವಾ ಸಂಖ್ಯೆಃ ***37/2015*** ರಿಂದ ***40/2015***

| | | | |
|---|---|---|---|
| ಅಸಲು ದಾವಾ ಸಂಖ್ಯೆಃ **37/2015** ರ ವಾದಿಯರುಗಳು | : | **1** | ಶ್ರೀ. ಎನ್. ಸಿದ್ದೇಗೌಡ **(Dead by LR's)** |
| | | **1(a)** | ಶ್ರೀ. ಹೆಚ್.ಎಸ್. ನಿಂಗೇಗೌಡ<br>ಬಿನ್ ಲೇಟ್ ಎನ್. ಸಿದ್ದೇಗೌಡ,<br>ವಯಸ್ಸು ಸುಮಾರು **55** ವರ್ಷ. |
| | | **1(b)** | ಶ್ರೀಮತಿ ಶಿವಲಿಂಗಮ್ಮ<br>ಬಿನ್ ಲೇಟ್ ಎನ್. ಸಿದ್ದೇಗೌಡ<br>ಕೋಂ. ತಿಮ್ಮಯ್ಯ,<br>ವಯಸ್ಸು ಸುಮಾರು **47** ವರ್ಷ.<br>ವಾಸಃ ಬಂಡಿಹಳ್ಳಿ ಗ್ರಾಮ,<br>ಹುಲಿಯೂರು ದುರ್ಗ ಹೋಬಳಿ,<br>ಕುಣಿಗಲ್ ತಾಲ್ಲೂಕು,<br>ತುಮಕೂರು ಜಿಲ್ಲೆ. |
| | | **2** | ಶ್ರೀ. ಹೆಚ್.ಎನ್. ಮಹಲಿಂಗ<br>ಬಿನ್ ಲೇಟ್ ಎನ್. ನಿಂಗೇಗೌಡ,<br>ವಯಸ್ಸು ಸುಮಾರು **35** ವರ್ಷ. |

| | | | |
|---|---|---|---|
| | | | **1(a) and 2 are R/o:**<br>ಹಳೇಹಳ್ಳಿ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| ಅಸಲು ದಾವಾ ಸಂಖ್ಯೆ: **38/2015** ರ ವಾದಿಯರುಗಳು | | **1** | ಶ್ರೀ ರಾಜು ಬಿನ್ ಲೇಟ್ ನಂಜೇಗೌಡ<br>ವಯಸ್ಸು ಸುಮಾರು **30** ವರ್ಷ. |
| | | **2** | ಶ್ರೀ. ಶಿವನಂಜೇಗೌಡ<br>ಬಿನ್ ಪಟೇಲ್ ತಮ್ಮೇಗೌಡ,<br>ವಯಸ್ಸು ಸುಮಾರು **55** ವರ್ಷ. |
| | | **3** | ಶ್ರೀ. ಚಿಕ್ಕತಮ್ಮೇಗೌಡ **(Dead by LR's)** |
| | | **3(a)** | ಶ್ರೀಮತಿ ನಾಗಮ್ಮ<br>ಕೋಂ. ಲೇಟ್ ಚಿಕ್ಕತಮ್ಮೇಗೌಡ,<br>ವಯಸ್ಸು ಸುಮಾರು **55** ವರ್ಷ. |
| | | **3(b)** | ಶ್ರೀ. ಹೆಚ್.ಸಿ. ನಂಜೇಶ್<br>ಬಿನ್ ಲೇಟ್ ಚಿಕ್ಕತಮ್ಮೇಗೌಡ,<br>ವಯಸ್ಸು ಸುಮಾರು **40** ವರ್ಷ. |
| | | **3(c)** | ಶ್ರೀ ಹೆಚ್.ಸಿ. ಅಶೋಕ್<br>ಬಿನ್ ಲೇಟ್ ಚಿಕ್ಕತಮ್ಮೇಗೌಡ,<br>ವಯಸ್ಸು ಸುಮಾರು **38** ವರ್ಷ. |
| | | **3(d)** | ಶ್ರೀ. ಹೆಚ್.ಸಿ. ಮಂಜುಳಾ<br>ಬಿನ್ ಲೇಟ್ ಚಿಕ್ಕತಮ್ಮೇಗೌಡ,<br>ವಯಸ್ಸು ಸುಮಾರು **35** ವರ್ಷ. |
| | | | **3(a)** ರಿಂದ **3(d)** ವರೆಗಿನ ಎಲ್ಲರೂ ವಾಸ:<br>ಸೀನಪ್ಪನದೊಡ್ಡಿ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲೂಕು,<br>ಮಂಡ್ಯ ಜಿಲ್ಲೆ. |
| | | **3(e)** | ಶ್ರೀಮತಿ ಹೆಚ್.ಸಿ.ಯೋಗಿತಾ<br>ಬಿನ್ ಲೇಟ್ ಚಿಕ್ಕತಮ್ಮೇಗೌಡ<br>ಕೋಂ. ಶ್ರೀನಿವಾಸ್,<br>ವಯಸ್ಸು ಸುಮಾರು **33** ವರ್ಷ. |

| | | | |
|---|---|---|---|
| | | | ವಾಸ: ಕಮಲನಗರ,<br>ಮಾರುಕಟ್ಟೆ ರಸ್ತೆ,<br>ಬೆಂಗಳೂರು. |
| | | **4** | ಶ್ರೀ. ಚಿಕ್ಕಮರಿ<br>ಬಿನ್ ಪಟೇಲ್ ತಮ್ಮೇಗೌಡ,<br>ವಯಸ್ಸು ಸುಮಾರು **40** ವರ್ಷ.<br>ವಾಸ: ಹಳೇಹಳ್ಳಿ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | | |
| ಅಸಲು ದಾವಾ ಸಂಖ್ಯೆ: **39/2015** ರ ವಾದಿಯರುಗಳು | | **1** | ಶ್ರೀ. ಹೆಚ್.ಎಲ್. ಶಂಕರ<br>ಬಿನ್ ಲೇಟ್ ನಂಜೇಗೌಡ,<br>ವಯಸ್ಸು ಸುಮಾರು **40** ವರ್ಷ. |
| | | **2** | ಶ್ರೀ. ನಂಜೇಶ್<br>ಬಿನ್ ಲೇಟ್ ನಿಂಗೇಗೌಡ,<br>ವಯಸ್ಸು ಸುಮಾರು **34** ವರ್ಷ. |
| | | **3** | ಶ್ರೀ. ಶಿವನಂಜೇಗೌಡ<br>ಬಿನ್ ಬುಕ್ಕೇಗೌಡ,<br>ವಯಸ್ಸು ಸುಮಾರು **58** ವರ್ಷ. |
| | | | <u>ಎಲ್ಲರೂ ವಾಸ:</u><br>ಹಳೇಹಳ್ಳಿ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | | |
| ಅಸಲು ದಾವಾ ಸಂಖ್ಯೆ: **40/2015** ರ ವಾದಿಯರುಗಳು | | **1** | ಮಹಾಲಿಂಗ **(Dead by LR's)** |
| | | **1(a)** | ಶ್ರೀಮತಿ ಲಕ್ಷ್ಮೀ<br>ಕೋಂ. ಲೇಟ್ ಮಹಾಲಿಂಗ,<br>ವಯಸ್ಸು ಸುಮಾರು **55** ವರ್ಷ. |
| | | **1(b)** | ಹೆಚ್.ಎಂ. ನಿಶ್ಚಿತ<br>ಬಿನ್ ಲೇಟ್ ಮಹಾಲಿಂಗ,<br>ವಯಸ್ಸು ಸುಮಾರು **30** ವರ್ಷ. |

| | | | |
|---|---|---|---|
| | | **1(c)** | ಶ್ರೀ. ಹೆಚ್.ಎಂ. ಕಿರಣ್<br>ಬಿನ್ ಲೇಟ್ ಮಹಾಲಿಂಗ,<br>ವಯಸ್ಸು ಸುಮಾರು 26 ವರ್ಷ. |
| | | | ಎಲ್ಲರೂ ವಾಸ:<br><br>ನಂ. 109, 1 ನೇ ಮುಖ್ಯ ರಸ್ತೆ,<br>3 ನೇ ಕ್ರಾಸ್, ಚಂದ್ರಶೇಖರ ಲೇಔಟ್,<br>ಶ್ರೀಗಂಧದ ಕಾವಲ್, ಸುಂಕದಕಟ್ಟೆ,<br>ಬೆಂಗಳೂರು. |
| | | **2** | ಶ್ರೀ. ಮಹೇಶ<br>ಬಿನ್ ಲೇಟ್ ಬಿ. ಕೆಂಪೇಗೌಡ,<br>ವಯಸ್ಸು ಸುಮಾರು 35 ವರ್ಷ. |
| | | **3** | ಶ್ರೀ. ಹೆಚ್.ಕೆ. ನಿಂಗೇಗೌಡ **(Dead by LR's)** |
| | | **3(a)** | ಶ್ರೀಮತಿ ಚಿಕ್ಕತಾಯಮ್ಮ<br>ಕೋಂ. ಲೇಟ್ ಹೆಚ್.ಕೆ. ನಿಂಗೇಗೌಡ,<br>ವಯಸ್ಸು ಸುಮಾರು 55 ವರ್ಷ. |
| | | **3(b)** | ಶ್ರೀಮತಿ ರೇಖಾ<br>ಕೋಂ. ಕುಮಾರ<br>ಬಿನ್ ಲೇಟ್ ಹೆ.ಕೆ. ನಿಂಗೇಗೌಡ,<br>ವಯಸ್ಸು ಸುಮಾರು 32 ವರ್ಷ.<br>ವಾಸ: ಚನ್ನಮ್ಮನಕೊಪ್ಪಲು ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | **3(c)** | ಶ್ರೀ. ರವಿಕುಮಾರ<br>ಬಿನ್ ಲೇಟ್ ಹೆಚ್.ಕೆ. ನಿಂಗೇಗೌಡ,<br>ವಯಸ್ಸು ಸುಮಾರು 30 ವರ್ಷ. |
| | | **3(d)** | ಶ್ರೀ. ಸಂತೋಷ ಹೆಚ್.ಎನ್.<br>ಬಿನ್ ಲೇಟ್ ಹೆಚ್.ಕೆ. ನಿಂಗೇಗೌಡ,<br>ವಯಸ್ಸು ಸುಮಾರು 28 ವರ್ಷ. |
| | | | **3 (a), 3(c) ಮತ್ತು 3(d) ರವರುಗಳ ವಾಸ:**<br>ಹಳೇಹಳ್ಳಿ ಗ್ರಾಮ ಮತ್ತು ಅಂಚೇ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | (ವಾದಿಗಳ ಪರ ವಕೀಲರು ಶ್ರೀ. ಹೆಚ್. ಮಾದೇಗೌಡ) | |

| ವಿರುದ್ಧ | | | |
|---|---|---|---|
| ಅಸಲು ದಾವಾ ಸಂಖ್ಯೆ: **37/2015, 38/2015, 39/2015 & 40/2015** ಪ್ರತಿವಾದಿಯರುಗಳು | : | **1** | ಶ್ರೀ. ಚಿಕ್ಕತಾಯಮ್ಮ<br>ಕೋಂ. ಲೇಟ್ ದೊಡ್ಡಬಿಳೀಗೌಡ,<br>ವಯಸ್ಸು ಸುಮಾರು **60** ವರ್ಷ. |
| | | **2** | ಶ್ರೀ. ಸತೀಶ<br>ಬಿನ್ ದೊಡ್ಡಬಿಳೀಗೌಡ,<br>ವಯಸ್ಸು ಸುಮಾರು **40** ವರ್ಷ. |
| | | **3** | ಶ್ರೀ. ಯೋಗೇಶ<br>ಬಿನ್ ದೊಡ್ಡಬಿಳೀಗೌಡ,<br>ವಯಸ್ಸು ಸುಮಾರು **38** ವರ್ಷ. |
| | | **4** | ಶ್ರೀಮತಿ ಇಂದುಮಣಿ<br>ಕೋಂ. ಮೂಗುರೇಗೌಡ,<br>ವಯಸ್ಸು ಸುಮಾರು **35** ವರ್ಷ.<br>ವಾಸ: ನೆಂಬಿನಾಯಕನಹಳ್ಳಿ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | **5** | ಶ್ರೀ. ಬೋರೇಗೌಡ<br>ಬಿನ್ ಲೇಟ್ ತಮ್ಮೇಗೌಡ,<br>ವಯಸ್ಸು ಸುಮಾರು **50** ವರ್ಷ. |
| | | **6** | ಶ್ರೀ. ಶಿವಣ್ಣ<br>ಬಿನ್ ಲೇಟ್ ತಮ್ಮೇಗೌಡ,<br>ವಯಸ್ಸು ಸುಮಾರು **45** ವರ್ಷ. |
| | | **7** | ಶ್ರೀ. ಪುಟ್ಟಸ್ವಾಮಿ<br>ಬಿನ್ ಲೇಟ್ ತಮ್ಮೇಗೌಡ,<br>ವಯಸ್ಸು ಸುಮಾರು **45** ವರ್ಷ. |
| | | **8** | ಶ್ರೀ. ಚಿಕ್ಕಮರೀಗೌಡ<br>ಬಿನ್ ಮರಿಯಪ್ಪ,<br>ವಯಸ್ಸು ಸುಮಾರು **55** ವರ್ಷ. |

| | | | |
|---|---|---|---|
| | | 9 | ಶ್ರೀಮತಿ ಚಿಕ್ಕತಾಯಮ್ಮ<br>ಬಿನ್ ಮರಿಯಕ್ಕ,<br>ವಯಸ್ಸು ಸುಮಾರು 40 ವರ್ಷ. |
| | | 10 | ಶ್ರೀಮತಿ ಚನ್ನಮ್ಮ<br>ಬಿನ್ ಮರಿಯಕ್ಕ,<br>ವಯಸ್ಸು ಸುಮಾರು 37 ವರ್ಷ. |
| | | 11 | ಶ್ರೀ. ಬೋರೇಗೌಡ<br>ಬಿನ್ ಮರಿಯಕ್ಕ,<br>ವಯಸ್ಸು ಸುಮಾರು 35 ವರ್ಷ. |
| | | | ಪ್ರತಿವಾದಿ 1 ರಿಂದ 3 ಮತ್ತು 5 ರಿಂದ 11 ರವರ ವಾಸ:<br>ತರಿಕೆರೆ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | 12 | ಶ್ರೀ. ಎಂ. ಪುಟ್ಟಸ್ವಾಮಿ<br>ಬಿನ್ ಮುದ್ದಯ್ಯ,<br>ವಯಸ್ಸು ಸುಮಾರು 50 ವರ್ಷ. |
| | | 13 | ಶ್ರೀಮತಿ ಮರಿಚಿಕ್ಕಮ್ಮ<br>ಕೋಂ. ಲೇಟ್ ಬೋರೇಗೌಡ,<br>ವಯಸ್ಸು ಸುಮಾರು 60 ವರ್ಷ. |
| | | 14 | ಶ್ರೀಮತಿ ಶಾಂತಮ್ಮ<br>ಬಿನ್ ಮರಿಚಿಕ್ಕಮ್ಮ,<br>ವಯಸ್ಸು ಸುಮಾರು 44 ವರ್ಷ. |
| | | 15 | ಶ್ರೀ. ರಮೇಶ<br>ಬಿನ್ ಬೋರೇಗೌಡ,<br>ವಯಸ್ಸು ಸುಮಾರು 42 ವರ್ಷ. |
| | | 16 | ಶ್ರೀ. ಶಿವರಾಜು<br>ಬಿನ್ ಬೋರೇಗೌಡ,<br>ವಯಸ್ಸು ಸುಮಾರು 42 ವರ್ಷ. |
| | | 17 | ಶ್ರೀಮತಿ ಚಿಕ್ಕತಾಯಮ್ಮ<br>ಬಿನ್ ಬೋರೇಗೌಡ,<br>ವಯಸ್ಸು ಸುಮಾರು 50 ವರ್ಷ. |
| | | 18 | ಶ್ರೀ. ಕುಮಾರ<br>ಬಿನ್ ಬೋರೇಗೌಡ,<br>ವಯಸ್ಸು ಸುಮಾರು 34 ವರ್ಷ.<br>ಪ್ರತಿವಾದಿ 13 ರಿಂದ 18 ರವರುಗಳ ವಾಸ:<br>ತರಿಕೆರೆ ಗ್ರಾಮ, ಕೋಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |

| | | | |
|---|---|---|---|
| | | 19 | ಶ್ರೀ. ರಮೇಶ<br>ಬಿನ್ ಲೇಟ್ ಸುಬ್ಬಣ್ಣ,<br>@ ನಂಜಪ್ಪ,<br>ವಯಸ್ಸು ಸುಮಾರು 42 ವರ್ಷ. |
| | | 20 | ಶ್ರೀಮತಿ ಸರೋಜಮ್ಮ<br>ಬಿನ್ ಸುಬ್ಬಣ್ಣ @ ನಂಜಪ್ಪ,<br>ವಯಸ್ಸು ಸುಮಾರು 42 ವರ್ಷ. |
| | | 21 | ಶ್ರೀ. ಚೆನ್ನಕೇಶವ<br>ಬಿನ್ ಲೇಟ್ ಸುಬ್ಬಣ್ಣ @ ನಂಜಪ್ಪ,<br>ವಯಸ್ಸು ಸುಮಾರು 34 ವರ್ಷ. |
| | | 22 | ಶ್ರೀಮತಿ ಸರೋಜಮ್ಮ<br>ಕೋಂ. ಲೇಟ್ ಶಿವಣ್ಣ,<br>ವಯಸ್ಸು ಸುಮಾರು 42 ವರ್ಷ. |
| | | 23 | ಶ್ರೀ. ನಿಂಗರಾಜು<br>ಬಿನ್ ಲೇಟ್ ಶಿವಣ್ಣ,<br>ವಯಸ್ಸು ಸುಮಾರು 23 ವರ್ಷ.<br>ಎಲ್ಲರೂ ವಾಸ: ತರಿಕೆರೆ ಗ್ರಾಮ,<br>ಕೊಪ್ಪ ಹೋಬಳಿ,<br>ಮದ್ದೂರು ತಾಲ್ಲೂಕು. |
| | | (ಪ್ರತಿವಾದಿ 1 ರಿಂದ 5, 10, 22 & 23- ಏಕಪಕ್ಷೀಯ)<br>(ಪ್ರತಿವಾದಿ 6, 11- Dead)<br>(ಪ್ರತಿವಾದಿ 13 ರಿಂದ 21 ಪರ ವಕೀಲರು ಶ್ರೀ. ಜಿ.ಆರ್.ಸಿ. )<br>(ಪ್ರತಿವಾದಿ 12 ರವರ ಪರ ವಕೀಲರು ಶ್ರೀ. ಟಿ.ಎಸ್.ಆರ್.) | |

| | |
|---|---|
| ದಾವೆಗಳನ್ನು ದಾಖಲು ಮಾಡಿದ ದಿನಾಂಕ | **20.04.2015** |
| ದಾವೆಯ ಸ್ವರೂಪ | ಹಕ್ಕು ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ |
| ಸಾಕ್ಷ್ಯವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ ದಿನಾಂಕ | **19.01.2019** |
| ತೀರ್ಪನ್ನು ಘೋಷಿಸಿದ ದಿನಾಂಕ | **15.06.2026** |
| ದಾವೆಯ ನಿಖಾಲೆಯಾದ ಅವಧಿ | ವರ್ಷ ತಿಂಗಳು ದಿವಸಗಳು<br>**11 01 25** |

(ಶ್ರೀಮತಿ ಹರಿಣಿ ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.

## :: ತೀರ್ಪು ::

ಅಸಲು ದಾವಾ ಸಂಖ್ಯೆ: 37/2015 ರಿಂದ 40/2015 ರ ವಾದಿಗಳು ಸದರಿ ದಾವೆಗಳನ್ನು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿ ಸ್ವತ್ತಿನ ಹಕ್ಕು ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಡಿಕ್ರಿ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

**2.** ಅಸಲು ದಾವಾ ಸಂಖ್ಯೆ: **37/2015** ರಿಂದ **40/2015** ರವರೆಗಿನ ದಾವೆಗಳ ದಾವಾ ಪತ್ರದ ಸಂಗತಿಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತೆ ಇರುತ್ತದೆ:-

ದಾವಾ ಅನುಸೂಚಿ ಸ್ವತ್ತು ಹಳೇಹಳ್ಳಿ ಗ್ರಾಮ, ಸರ್ವೆ ನಂ. 7 ರಲ್ಲಿ ಖರಾಬು ಸೇರಿ 20 ಎಕರೆ 0.24 ಗುಂಟೆ ಜಮೀನು ಮೂಲತಃ ವೆಂಕಟಕೃಷ್ಣಯ್ಯ ಮತ್ತು ಅವರ ಮಕ್ಕಳಿಗೆ ಸೇರಿದ್ದು, ಸದರಿ ಸರ್ವೆ ನಂ. 7 ಜಮೀನು ಮೊದಲು ಹಳೇಹಳ್ಳಿ ಗ್ರಾಮ, ಸರ್ವೆ ನಂ. 6 ಇದ್ದು, ಸದರಿ ಜಮೀನು ವೆಂಕಟ ಕೃಷ್ಣಯ್ಯ ಮತ್ತು ಅವರ ಮಕ್ಕಳಿಂದ ಲಿಂಗ ಅಲಿಯಾಸ್ ಮೊಳ್ಳ, ನಂಜೇಗೌಡ, ಅಣ್ಣಯ್ಯ ಮತ್ತು ನಿಂಗ ರವರುಗಳು ದಿನಾಂಕ 10.10.1905 ರಲ್ಲಿ ಖರೀದಿಸಿರುತ್ತಾರೆ. ಸದರಿ ಖರೀದಿ ಕಾಲಕ್ಕೆ ಆ ಸ್ವತ್ತು ಹಳೇಹಳ್ಳಿ ಸರ್ವೆ ನಂ. 6 ರ ಭಾಗವಾಗಿದ್ದು, ಸದರಿ ಸರ್ವೆ ನಂಬರ್ 6 ದಿನಾಂಕ 05.12.1911 ರಂದು ರೀ-ಸರ್ವೆ ಆಗಿ ಸರ್ವೆ ನಂ. 7 ಆಗಿರುತ್ತದೆ. ಸದರಿ 4 ಜನ ಖರೀದಿದಾರರು ಖರೀದಿಸಿದ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ- ದೊಡ್ಡಹೊಳೆ, (ಶಿಂಷಾ ನದಿ) ಪಶ್ಚಿಮಕ್ಕೆ- ನರಸಿಂಹ (ಸರ್ವೆ ನಂ.6) ರವರು ಜಮೀನು, ಉತ್ತರಕ್ಕೆ- ಕಿರಂಗೂರು ಎಲ್ಲೆ ಮತ್ತು ದಕ್ಷಿಣಕ್ಕೆ ತಿಮ್ಮಯ್ಯ ಮತ್ತು ಇತರರು ಹಾಗೂ ಹಳ್ಳ ಕೊರಕಲು ಆಗಿರುತ್ತದೆ. ಸದರಿ ಸ್ವತ್ತನ್ನು 4 ಜನರು ಖರೀದಿಸಿದ ಬಳಿಕ 3 ಎಕರೆ 0.24 ಗುಂಟೆ ಜಮೀನನ್ನು ಲಿಂಗ ಅಲಿಯಾಸ್ ಕೋಣಿಯ ರವರಿಗೆ ಹಳೆಯ ಸರ್ವೆ ನಂ.6 ಎಂದು ನಮೂದಿಸಿ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದು, ಸದರಿ ಕ್ರಯಪತ್ರದ ಮೂಲಕ ಲಿಂಗ ಅಲಿಯಾಸ್

ಕೋಣಿಯ ರವರಿಗೆ ಯಾವುದೇ ಸ್ವಾಧೀನವನ್ನು ಬಿಟ್ಟುಕೊಟ್ಟಿರುವುದಿಲ್ಲ. ಕಾರಣ ಸದರಿ ಕ್ರಯಪತ್ರ ನಾಮಮಾತ್ರ ಕ್ರಯಪತ್ರವಾಗಿದ್ದು, 4 ಜನ ಖರೀದಿದಾರರು ಸ್ವಾಧೀನದಲ್ಲಿಯೇ ಮುಂದುವರಿದಿರುತ್ತಾರೆ. ಸದರಿ ಕ್ರಯಪತ್ರದ ಕಾಲಕ್ಕೆ ಸರ್ವೆ ನಂ.6 ಬದಲಾವಣೆಯಾಗದೇ ಇದ್ದ ಕಾರಣ ಅದೇ ಸರ್ವೆ ನಂಬರನ್ನು ಕ್ರಯಪತ್ರದಲ್ಲಿ ನಮೂದಿಸಿರುತ್ತಾರೆ. ನಂತರ ಅಣ್ಣೇಗೌಡ ರವರು ಲಿಂಗೇಗೌಡ ಅಲಿಯಾಸ್ ಮೊಳ್ಳೇಗೌಡ ರವರಿಂದ ಹಣವನ್ನು ಸಾಲವಾಗಿ ಪಡೆದು, ಸರ್ವೆ ನಂ.6 ರ 20 ಎಕರೆ 0.24 ಗುಂಟೆಯ ಸ್ವಲ್ಪ ಭಾಗವನ್ನು ಅಡಮಾನ ಮಾಡಿಕೊಟ್ಟಿರುತ್ತಾರೆ. ಆದರೆ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಮಾತ್ರ 4 ಜನ ಖರೀದಿದಾರರು ಮುಂದುವರೆದುಕೊಂಡು ಬಂದಿರುತ್ತಾರೆ. ಆ ನಂತರ ಅಣ್ಣೇಗೌಡ ರವರು ಸಾಲದ ಹಣವನ್ನು ಮರುಪಾವತಿಸಿ, ಸ್ವತ್ತಿನ ಅಡಮಾನವನ್ನು ಬಿಡುಗಡೆಗೊಳಿಸಿಕೊಂಡಿರುತ್ತಾರೆ. ಆ ನಂತರ 4 ಜನ ಖರೀದಿದಾರರು ಸೇರಿ ದಿನಾಂಕ 21.12.1923 ರಂದು ಲಿಂಗೇಗೌಡ ಅಲಿಯಾಸ್ ಕೋಣೀಗೌಡ ರವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದು, ಸದರಿ ಕ್ರಯಪತ್ರದಲ್ಲಿ ಸರ್ವೆ ನಂಬರ್ 6 ರೀ-ಸರ್ವೆ ಆಗಿ ಸರ್ವೆ ನಂ.7 ಆಗಿದ್ದರಿಂದ ಸರ್ವೆ ನಂ.7 ಎಂದು ನಮೂದಿಸಲಾಗಿರುತ್ತದೆ. ಸದರಿ ಕ್ರಯಪತ್ರವೂ ಸಹ ನಾಮಮಾತ್ರ ಕ್ರಯಪತ್ರವಾಗಿದ್ದು, ಸ್ವಾಧೀನವನ್ನು ಖರೀದಿದಾರರಿಗೆ ಬಿಟ್ಟುಕೊಡದೇ 4 ಜನರು ಸ್ವಾಧೀನಾನುಭವದಲ್ಲಿರುತ್ತಾರೆ. ಅದರಂತೆ ದಿನಾಂಕ 21.12.1923 ಹಾಗೂ ದಿನಾಂಕ 29.03.1906 ರ ಕ್ರಯಪತ್ರಗಳು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಹಾಗಾಗಿ, ದಾವಾ ಸ್ವತ್ತಿನ ಸ್ವಾಧೀನದ ಹಕ್ಕು ಮೇಲೆ ಹೇಳಿದ 4 ಜನ ಖರೀದಿದಾರರ ಬಳಿಯೇ ಮುಂದುವರಿದಿರುತ್ತದೆ. ಹಾಗಾಗಿ, ದಿನಾಂಕ 10.10.1905 ರ ಕ್ರಯಪತ್ರದ ಪ್ರಕಾರ ಮೇಲೆ ಹೇಳಿದ 4 ಜನರು ದಾವಾ ಸ್ವತ್ತಿನ ಹಕ್ಕು ಮತ್ತು ಸ್ವಾಧೀನದಾರರಾಗಿರುತ್ತಾರೆ. ವಾದಿಯರು ನಿಂಗ ಬಿನ್ ಬಂಡೇಗೌಡ ರವರ ಮೊಮ್ಮಕ್ಕಳಾಗಿರುತ್ತಾರೆ. ಲಿಂಗ ಅಲಿಯಾಸ್ ಮೊಳ್ಳಿ ಮತ್ತು ಇತರರು ಸ್ವತ್ತನ್ನು

ಖರೀದಿಸಿದ ಬಳಿಕ ಅಣ್ಣಯ್ಯ ಬಿನ್ ಲಿಂಗ ರವರು ತಮ್ಮ ಬಾಬ್ತು ಭಾಗದ 2 ಎಕರೆ 0.36 ½ ಗುಂಟೆ ಜಮೀನನ್ನು ಸಣ್ಣ ನಿಂಗೇಗೌಡ ಬಿನ್ ಚೋಟೀ ಮರೀಗೌಡ ರವರಿಗೆ ದಿನಾಂಕ 04.11.1943 ರಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಆ ನಂತರದಲ್ಲಿ ಲಿಂಗ ಅಲಿಯಾಸ್ ಮೊಳ್ಳ ಮತ್ತು ಇತರೆ 3 ಜನ ಖರೀದಿದಾರರು ಸೇರಿಕೊಂಡು 20 ಎಕರೆ 24 ಗುಂಟೆ ಜಮೀನನ್ನು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ಆ ರೀತಿ ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು 4 ಜನ ಖರೀದಿದಾರರ ವಾರಸುದಾರರಿಗೆ ಬಂದಿರುತ್ತದೆ ಮತ್ತು ಅವರ ವಾರಸುದಾರರಾಗಿ ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯರುಗಳು ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ದಾವಾ ಸ್ವತ್ತನ್ನು 4 ಜನ ಖರೀದಿದಾರರಾಗಲೀ, ಅವರ ವಾರಸುದಾರರಾಗಲೀ, ಮರಿಯಕ್ಕ ಮತ್ತು ಚಿಕ್ಕನಂಜುಂಡ ಎಂಬುವವರಿಗೆ 20 ಎಕರೆ 0.24 ಗುಂಟೆ ಜಮೀನನ್ನು ಮಾರಾಟ ಮಾಡಿರುವುದಿಲ್ಲವೆಂದೂ, ಆದಾಗ್ಯೂ ರೆವಿನ್ಯೂ ಅಧಿಕಾರಿಗಳ ಜೊತೆ ಶಾಮೀಲಾಗಿ ಅವರ ಹೆಸರಿಗೆ ರೆವಿನ್ಯೂ ದಾಖಲಾತಿಗಳನ್ನು ಮಾಡಿಸಿಕೊಂಡಿದ್ದು, ಸದರಿ ವಿಚಾರ 2001ನೇ ಇಸವಿಯಲ್ಲಿ ತಿಳಿದುಬಂದಿರುತ್ತದೆಂದೂ, ನಂತರ ಸದರಿ ಖಾತಾ ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಪ್ರಶ್ನಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸಬೇಕೆಂದು ಆದೇಶ ನೀಡಿದ ಮೇರೆಗೆ ಮಂಡ್ಯ ಉಪ ವಿಭಾಗಾಧಿಕಾರಿಗಳ ಮುಂದೆ ಅಫೀಲು ಸಲ್ಲಿಸಿದ್ದು, ಅದು ವಜಾ ಆಗಿರುತ್ತದೆ. ನಂತರ ಅದನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಅದೂ ವಜಾ ಆಗಿರುತ್ತದೆ. ಸದರಿ ಅಪೀಲುಗಳು ವಜಾ ಆದ ಬಳಿಕ ಪ್ರತಿವಾದಿಯರು ಅದರ ದುರ್ಲಾಭ ಪಡೆದು ದಾವಾ ಅನುಸೂಚಿ ಸ್ವತ್ತಿನ ವಾದಿಯರ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿ 12 ರವರಿಗೆ ಯಾವುದೇ ಹಕ್ಕು, ಹಿತಾಸಕ್ತಿ, ಸ್ವಾಧೀನವೂ ಇರುವುದಿಲ್ಲ. 12ನೇ ಪ್ರತಿವಾದಿಗೆ ಯಾವುದೇ ಹಕ್ಕು

ಪ್ರಾಪ್ತವಾಗುವುದಿಲ್ಲ. ಸದರಿ ಕ್ರಯ ವಾದಿಯರುಗಳ ಹಕ್ಕನ್ನು ಬದ್ಧಪಡಿಸುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ವಾದಿಯರುಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನ ಹಕ್ಕು ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿದ್ದು, ದಾವಾಗಳಲ್ಲಿ ಕೇಳಿರುವ ರೀತಿ ಡಿಕ್ರಿ ಮಾರ್ಪಡಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

**3.** ವಾದಿಯರುಗಳು ದಾವಾ ದಾಖಲಿಸಿದ ನಂತರ ಈ ನ್ಯಾಯಾಲಯವು ಪ್ರತಿವಾದಿಗಳಿಗೆ ದಾವಾ ಸಮನ್ಸ್ ಕಳುಹಿಸಿದ್ದು, ಅದು ಪ್ರತಿವಾದಿಗೆ ಜಾರಿಯಾದ ಮೇರೆಗೆ ಪ್ರತಿವಾದಿ 12, 13 ರಿಂದ 21 ರವರುಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಉಳಿದ ಪ್ರತಿವಾದಿಯರು ಗೈರುಹಾಜರಾಗಿ ಏಕಪಕ್ಷೀಯವಾಗಿರುತ್ತಾರೆ. 12ನೇ ಪ್ರತಿವಾದಿ ಮಾತ್ರ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

**4.** <u>ಅಸಲು ದಾವಾ ಸಂಖ್ಯೆ: **37/2015** ರಿಂದ **40/2015**ರ **12**ನೇ ಪ್ರತಿವಾದಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯ ಸಂಗತಿಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತೆ ಇರುತ್ತದೆ:-</u>

ಈ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ವಾದಿಯರುಗಳು ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಮತ್ತು ಸದರಿ ಸಂಗತಿಗಳನ್ನು ವಾದಿಯರುಗಳೇ ಪುರಾವೆ ಮಾಡಬೇಕೆಂದು ಹೇಳಿರುತ್ತಾರೆ. ಮುಂದುವರೆದು, ವಾದಿ ತಮ್ಮ ವಾದ ಪತ್ರದಲ್ಲಿ ವಾಸ್ತವಾಂಶಗಳನ್ನು ಹೇಳಿರುವುದಿಲ್ಲ. ಸರ್ವೆ ನಂ. 6 ಮತ್ತು 7 ಎರಡೂ ಸ್ವತ್ತುಗಳು ಹಳೇಹಳ್ಳಿ ಗ್ರಾಮ, ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕಿನಲ್ಲಿ ಅಸ್ಥಿತ್ವದಲ್ಲಿರುತ್ತವೆ. ಎರಡೂ ಸ್ವತ್ತುಗಳ ಚೆಕ್ ಬಂದಿ ಬೇರೆ ಬೇರೆಯಾಗಿರುತ್ತದೆ. ಸರ್ವೆ ನಂ. 6 ರಲ್ಲಿ 20 ಎಕರೆ 0.24 ಗುಂಟೆ ಇದ್ದು, ಸುಬ್ಬರಾಯ ಬಿನ್ ವೆಂಕಟಪ್ಪರ ಮತ್ತು

ವೆಂಕಟರಾಮಯ್ಯ ಬಿನ್ ವೆಂಕಟಕೃಷ್ಣಪ್ಪ ರವರಿಗೆ ಸೇರಿರುತ್ತದೆ. ದಿನಾಂಕ 10.10.1905 ರಲ್ಲಿ ಸುಬ್ಬರಾಯ ಮತ್ತು ವೆಂಕಟರಾಮಯ್ಯ ರವರ ಮಕ್ಕಳಾದ ಶ್ರೀನಿವಾಸಯ್ಯ, ವೆಂಕಟ ಕೃಷ್ಣಪ್ಪ, ರಾಮಯ್ಯ ಸದರಿ ಸ್ವತ್ತನ್ನು ಲಿಂಗ ಅಲಿಯಾಸ್ ಮೊಳ್ಳೆ ಬಿನ್ ಬುಡ್ಡೇಗೌಡ, ಅಣ್ಣಯ್ಯ ಅಲಿಯಾಸ್ ನಿಂಗ, ನಂಜೇಗೌಡ ಬಿನ್ ಪಟೇಲ್ ವೀರೇಗೌಡ ಮತ್ತು ನಿಂಗ ಬಿನ್ ಕುಳ್ಳ ಸಿದ್ದನ ಬಂಡೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕ 04.11.1943 ರಲ್ಲಿ ನಿಂಗ ಬಿನ್ ಬುಡ್ಡೇಗೌಡ, ಲಿಂಗ ಅಲಿಯಾಸ್ ಮೊಳ್ಳೇ ಬಿನ್ ಬುಡ್ಡೇಗೌಡ ಮತ್ತು ಅಣ್ಣಯ್ಯ ಬಿನ್ ನಿಂಗ ರವರು 2 ಎಕರೆ 0.36 ಗುಂಟೆ ಸ್ವತ್ತನ್ನು ಸಣ್ಣ ನಿಂಗೇಗೌಡ ಬಿನ್ ಚೋಟೀ ಮರೇಗೌಡ ರವರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಮೇಲೆ ಹೇಳಿದ 3 ಜನರು ಸರ್ವೆ ನಂ. 6 ರ ಮಾಲೀಕರಾಗಿದ್ದು, ಸದರಿಯವರಿಗೆ ಸೇರಿದ ಸರ್ವೆ ನಂ. 7ರ ಒಂದು ಭಾಗವನ್ನು ಸಣ್ಣನಿಂಗೇಗೌಡ ರವರಿಗೆ ದಿನಾಂಕ 04.11.1943 ರ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಸರ್ವೆ ನಂ.7ಕ್ಕೆ ಅವರು ಮಾಲೀಕರಾಗಿರುವುದಿಲ್ಲ. ಹಾಗಾಗಿ ದಿನಾಂಕ 04.11.1943 ರ ಕ್ರಯಪತ್ರದ ಮೂಲಕ ಸಣ್ಣೇಗೌಡ ಖರೀದಿಸಿರುವ 2 ಎಕರೆ 0.36 ಗುಂಟೆ ಸ್ವತ್ತಿನಲ್ಲಿ ಯಾವುದೇ ಹಕ್ಕು ಅವರಿಗೆ ಇರುವುದಿಲ್ಲ ಮತ್ತು ಅವರು ಮಾಲೀಕರಾಗಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಹಕ್ಕನ್ನು ಕ್ಲೇಮು ಮಾಡಲು ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ.

**5.** ಮುಂದುವರೆದು, ಹಳೇಹಳ್ಳಿ ಗ್ರಾಮದ ಕರೀಗೌಡ ರವರ ಕುಟುಂಬದವರು ಅಂದರೆ ಅವರ ಮಕ್ಕಳು ನಂಜೇಗೌಡ, ನಿಂಗೇಗೌಡ, ಜವರೇಗೌಡ ದಿನಾಂಕ 10.03.1970 ರಲ್ಲಿ ಸರ್ವೆ ನಂ.6 ಕ್ಕೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿದ್ದು, ಕರೀಗೌಡನ ಮಕ್ಕಳಾದ ನಂಜೇಗೌಡ ರವರಿಗೆ 3 ಎಕರೆ, ನಂಜ ಬಿನ್ ನಂಜೇಗೌಡ ರವರಿಗೆ 3 ಎಕರೆ ಮತ್ತು ರವಿ ಬಿನ್ ಜವರೇಗೌಡ ರವರಿಗೆ 0.27 ಗುಂಟೆ ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗವನ್ನು ಮದ್ದೂರು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ

ನೋಂದಣಿಯಾಗಿರುತ್ತದೆ. ಸದರಿ ವಿಭಾಗ ಪತ್ರದ ಪ್ರಕಾರ ಹಳೇಹಳ್ಳಿ ಗ್ರಾಮದ ಸರ್ವೆ ನಂ. 6 ಅಸ್ಥಿತ್ವದಲ್ಲಿರುವುದು ಕಂಡುಬರುತ್ತದೆ. ಸದರಿ ಸರ್ವೆ ನಂ. 6 ಕರೀಗೌಡರವರಿಗೆ ಸೇರಿರುವುದಾಗಿ ಕಂಡುಬರುತ್ತದೆ. ಅದು ವಾದಿಯರ ಸ್ವತ್ತು ಆಗಿರುವುದಿಲ್ಲ. ಹಾಗೆಯೇ ಸರ್ವೆ ನಂ.7 ಇದು ಸರ್ವೆ ನಂ. 6 ರ ಪೂರ್ವ ದಿಕ್ಕಿಗೆ ಇರುವುದು ಕಂಡುಬರುತ್ತದೆ. ಇದು ಗ್ರಾಮ ನಕ್ಷೆಗೆ ತಾಳೆ ಇರುತ್ತದೆಂದು ಹೇಳುತ್ತಾರೆ.

**6.** ಮುಂದುವರೆದು, ಗ್ರಾಮ ಸರ್ವೆ ನಂ. 7 ಒಟ್ಟು 26 ಎಕರೆ 0.01 ಗುಂಟೆ ವಿಸ್ತೀರ್ಣವಿರುತ್ತದೆ. ಆ ಪೈಕಿ 0.12 ಗುಂಟೆ ಎ ಖರಾಬು ಮತ್ತು 1 ಎಕರೆ 0.33 ಗುಂಟೆ 'ಬಿ' ಖರಾಬು ಇರುತ್ತದೆ. ವ್ಯವಸಾಯದ ಜಮೀನು ಒಟ್ಟು 23 ಎಕರೆ 0.36 ಗುಂಟೆ ವಿಸ್ತೀರ್ಣವಿರುತ್ತದೆ. ಸದರಿ ಸ್ವತ್ತು ಪುಟ್ಟೇಗೌಡ ರವರ ಪಿತ್ರಾರ್ಜಿತವಾದ ಜಮೀನು ಆಗಿದ್ದು, ಅವರಿಗೆ ದೊಡ್ಡ ನಂಜುಂಡ ಮತ್ತು ಚಿಕ್ಕ ನಂಜುಂಡ ಎಂಬ ಇಬ್ಬರು ಮಕ್ಕಳಿದ್ದು, ದೊಡ್ಡ ನಂಜುಂಡರವರು ಮರಿಯಕ್ಕನನ್ನು ವಿವಾಹವಾಗಿರುತ್ತಾರೆ. ನಂಜುಂಡಯ್ಯ ನಂಜುಮ್ಮ ರವರನ್ನು ವಿವಾಹವಾಗಿರುತ್ತಾರೆ. ಸದರಿ ದೊಡ್ಡ ನಂಜುಂಡಪ್ಪರವರಿಗೆ ನಂಜಮ್ಮ ಸಣ್ಣಮ್ಮ ಮತ್ತು ನಿಂಗಮ್ಮ ಎಂಬ ಮೂವರು ಮಕ್ಕಳು ಮತ್ತು ಚಿಕ್ಕ ನಂಜುಂಡ ರವರಿಗೆ ನಂಜಪ್ಪ ಅಲಿಯಾಸ್ ಸುಬ್ಬಣ್ಣ ಎಂಬ ಮಗ ಇದ್ದರು. 13ನೇ ಪ್ರತಿವಾದಿಯ ಬೋರೇಗೌಡ ರವರು ನಂಜಮ್ಮ ಮತ್ತು ಬೋರೇಗೌಡರ ಒಬ್ಬ ಮಗನಾಗಿದ್ದು, ಸದರಿಯವರನ್ನು ದಿನಾಂಕ 24.10.1951 ರಂದುಸಣ್ಣಮ್ಮ ಅಲಿಯಸ್ ಲಿಂಗಮ್ಮ ಮತ್ತು ಮರಿಗೌಡರಿಗೆ ದತ್ತು ನೀಡಿರುತ್ತಾರೆ. ಚಿಕ್ಕ ನಂಜುಂಡಿ ರವರ ಮಗ ನಂಜಪ್ಪ ಅಲಿಯಾಸ್ ಸುಬ್ಬಣ್ಣ ರವರು ದಿನಾಂಕ 05.07.1965 ರಲ್ಲಿ ಸರ್ವೆ ನಂ. 7 ರಲ್ಲಿ 2 ಎಕರೆ .020 ಗುಂಟೆ ಜಮೀನನ್ನು ಕೆಂಪೇಗೌಡ ಬಿನ್ ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕ 20.05.1967 ರಲ್ಲಿ ಸಣ್ಣಮ್ಮನ ದತ್ತು ಮಗ ಬೋರೇಗೌಡ ಸರ್ವೆ ನಂ. 7 ರಲ್ಲಿ 2 ಎಕರೆ 0.07 ಗುಂಟೆ ಜಮೀನು ಚಿಕ್ಕು ಬಿನ್

ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕ 04.09.2014 ರಂದು 13 ರಿಂದ 21ನೇ ಪ್ರತಿವಾದಿಯರು ಸರ್ವೆ ನಂ. 7 ರಲ್ಲಿ 1 ಎಕರೆ 0.33 ಗುಂಟೆ ಖರಾಬು ಸೇರಿ ಒಟ್ಟು 21 ಎಕರೆ 0.02 ಗುಂಟೆ ಜಮೀನನ್ನು 12ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ 12ನೇ ಪ್ರತಿವಾದಿ ಸರ್ವೆ ನಂ. 7 ರ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ. ಮುಂದುವರೆದು, ಲಿಂಗ, ನಿಂಗ ಮತ್ತು ಅಣ್ಣಯ್ಯ ಇವರು ಹಳೇಹಳ್ಳಿ ಗ್ರಾಮ ಸರ್ವೆ ನಂ.7ರ ಮಾಲೀಕರಾಗಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಯಾವುದೋ ಸ್ವಾಧೀನವೂ ಇರುವುದಿಲ್ಲ. ಆದಾಗ್ಯೂ ದಿನಾಂಕ 04.11.1943 ರಲ್ಲಿ ಸಣ್ಣನಿಂಗೇಗೌಡರವರಿಗೆ ಸರ್ವೆ ನಂ. 7 ರಲ್ಲಿ 2 ಎಕರೆ 0.36 ಗುಂಟೆ ಮಾರಾಟ ಮಾಡಿದ್ದು, ಸದರಿ ಕ್ರಯಪತ್ರವು ಶೂನ್ಯ ದಾಖಲಾತಿಯಾಗಿರುತ್ತದೆಂದೂ ನಿಲುವು ತೆಗೆದುಕೊಂಡಿರುತ್ತಾರೆ. ಆದ್ದರಿಂದ ಈ ಮೇಲೆ ವಿವರಿಸಿದ ಕಾರಣಗಳಿಗಾಗಿ ವಾದಿಯರುಗಳ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

**7.** ಈ ನ್ಯಾಯಾಲಯವು ಅಸಲು ದಾವಾ ಸಂಖ್ಯೆ: **37/2015** ರಿಂದ **40/2015** ರವರೆಗಿನ ವಾದಿಯರುಗಳ ದಾವಾ ಪತ್ರ ಮತ್ತು **12**ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆ ಆಧಾರದ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ರಚಿಸಿರುತ್ತದೆ.

<u>::ಅಸಲು ದಾವಾ ಸಂಖ್ಯೆ: **37/2015**ರ ವಿವಾದಾಂಶಗಳು::</u>

1. **Whether the plaintiffs prove that they are the absolute owners in possession of the suit schedule property as claimed in the suit?**
2. **Whether the plaintiffs prove that the defendants are causing interference in the suit property by cutting and removing the standing trees?**
3. **Whether the plaintiffs are entitled for the relief as sought in the suit?**
4. **What order or decree?**

**Additional Issues framed on 10.12.2018**

1. **Whether the plaintiffs prove that Sy.No.6 of Halehalli Village, Koppa Hobli, Maddur Taluk has been assigned with the Sy.No.7 after the resurvey conducted as stated in the suit?**

**::ಅಸಲು ದಾವಾ ಸಂಖ್ಯೆ: 38/2015ರ ವಿವಾದಾಂಶಗಳು::**

1. **Whether the plaintiffs prove that they are the absolute owners in possession of the suit schedule property as claimed in the suit?**
2. **Whether the plaintiffs prove that the defendants are causing interference in the suit property by cutting and removing the standing trees?**
3. **Whether the plaintiffs are entitled for the relief as sought in the suit?**
4. **What order or decree?**

**Additional Issues framed on 10.12.2018**

1. **Whether the plaintiffs prove that Sy.No.6 of Halehalli Village, Koppa Hobli, Maddur Taluk has been assigned with the Sy.No.7 after the resurvey conducted as stated in the suit?**

**::ಅಸಲು ದಾವಾ ಸಂಖ್ಯೆ: 39/2015ರ ವಿವಾದಾಂಶಗಳು::**

1. **Whether the plaintiffs prove that they are the absolute owners in possession of the suit schedule property as claimed in the suit?**
2. **Whether the plaintiffs prove that the defendants are causing interference in the suit property by cutting and removing the standing trees?**
3. **Whether the plaintiffs are entitled for the relief as sought in the suit?**
4. **What order or decree?**

**Additional Issues framed on 10.12.2018**

1. **Whether the plaintiffs prove that Sy.No.6 of Halehalli Village, Koppa Hobli, Maddur Taluk has been assigned with the Sy.No.7 after the resurvey conducted as stated in the suit?**

**::ಅಸಲು ದಾವಾ ಸಂಖ್ಯೆ: 40/2015ರ ವಿವಾದಾಂಶಗಳು::**

1. **Whether the plaintiffs prove that they are the absolute owners in possession of the suit schedule property as claimed in the suit?**
2. **Whether the plaintiffs prove the alleged interference as stated in the suit?**
3. **Whether the plaintiffs are entitled for the relief of permanent injunction as claimed in the suit?**
4. **Whether the suit is bad for non-joinder of necessary parties?**
5. **Whether the defendant No.12 proves that he is the absolute owner in possession of 21 acress 0.02 guntas by the virtue of sale deed dated 04.09.2014 as claimed in his written statement?**
6. **Whether the plaintiffs are entitled for the relief as sought in the suit?**
7. **What order or decree?**

**Additional Issues framed on 10.12.2018**

1. **Whether the plaintiffs prove that Sy.No.6 of Halehalli Village, Koppa Hobli, Maddur Taluk has been assigned with the Sy.No.7 after the resurvey conducted as stated in the suit?**

**8.** ಅಸಲು ದಾವಾ ಸಂಖ್ಯೆ: 37/2015 ರ 2ನೇ ವಾದಿ ಹೆಚ್.ಎನ್. ಮಹಾಲಿಂಗ ರವರು ತಮ್ಮ ವಾದ ಪತ್ರದ ಸಂಗತಿಗಳನ್ನು ಸಾಭೀತುಪಡಿಸಲು ತಾವೇ ಸ್ವತಃ ಪಿಡಬ್ಲ್ಯೂ-1 ಎಂದು ಸಾಕ್ಷ್ಯ ವಿಚಾರಣೆ ನೀಡಿದ್ದು, ತಮ್ಮ ಪರ ಒಟ್ಟು 19 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-19 ಎಂದು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಅಸಲು ದಾವಾ ಸಂಖ್ಯೆ: 38/2015ರ ವಾದಿಯರು ತಮ್ಮ ವಾದ ಪತ್ರದ ಸಂಗತಿಗಳನ್ನು ಸಾಭೀತುಪಡಿಸಲು 1ನೇ ವಾದಿ ರಾಜು ರವರು ತಮ್ಮ ವಾದ ಪತ್ರದ ಸಂಗತಿಗಳನ್ನು ಸಾಭೀತುಪಡಿಸಲು ಸ್ವತಃ ಪಿಡಬ್ಲ್ಯೂ-2 ಎಂದು ಸಾಕ್ಷ್ಯ ನುಡಿದು, ಒಟ್ಟು 19 ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-20 ರಿಂದ ನಿಶಾನೆ ಪಿ-37 ಎಂದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ನಂತರ ಅಸಲು ದಾವಾ ಸಂಖ್ಯೆ: 39/2015 ರ ವಾದಿಯರು ತಮ್ಮ ವಾದ ಪತ್ರದ ಸಂಗತಿಗಳನ್ನು ಸಾಭೀತುಪಡಿಸಲು ತಮ್ಮ ಜಿ.ಪಿ.ಎ. ಹೋಲ್ಡರ್ ಶಿವರಾಜು ರವರ ಮೂಲಕ ಪಿಡಬ್ಲ್ಯೂ-4 ಎಂದು ಸಾಕ್ಷ್ಯ ನುಡಿದು ಒಟ್ಟು 19 ದಾಖಲಾತಿಗಳನ್ನು ಹಾಜರುಪಡಿಸಿದು, ಅವುಗಳನ್ನು ಕ್ರಮವಾಗಿ ನಿಪಿ-38 ರಿಂದ ನಿಶಾನೆ ಪಿ-55 ಎಂದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ನಂತರ ಅಸಲು ದಾವಾ ಸಂಖ್ಯೆ: 40/2015 ರ ವಾದಿಯರು ತಮ್ಮ ವಾದ ಪತ್ರದ ಸಂಗತಿಗಳನ್ನು ಸಾಭೀತುಪಡಿಸಲು 3ನೇ ವಾದಿಯ ಕಾನೂನುಬದ್ಧ ವಾರಸುದಾರರಾದ ಸಂತೋಷ್ ಹೆಚ್.ಎನ್. ರವರ ಮೂಲಕ ಪಿಡಬ್ಲ್ಯೂ-5 ಎಂದು ಸಾಕ್ಷ್ಯ ನುಡಿದು ತಮ್ಮ ಪರ ನಿಶಾನೆ ಪಿ-59 ರಿಂದ ನಿಶಾನೆ ಪಿ-73 ಎಂದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ನಂತರ ವಾದಿಗಳ ಪರ ಸಾಕ್ಷ್ಯ ವಿಚಾರಣೆಯನ್ನು ಪೂರ್ಣಗೊಳಿಸಲಾಗಿದೆ.

**9.** 12 ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ತೆಗೆದುಕೊಂಡಿರುವ ನಿಲುವನ್ನು ಸಾಭೀತುಪಡಿಸಲು ಸ್ವತಃ ಡಿಡಬ್ಲ್ಯೂ-1 ಎಂದು ಸಾಕ್ಷ್ಯ ನುಡಿದು ತಮ್ಮ ಪರ 5 ಜನ ಸಾಕ್ಷ್ಯದಾರರನ್ನು ಕ್ರಮವಾಗಿ ಡಿಡಬ್ಲ್ಯೂ-2 ರಿಂದ ಡಿಡಬ್ಲ್ಯೂ-6 ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿರುತ್ತಾರೆ. ನಂತರ ಪ್ರತಿವಾದಿಗಳ ಪರ ಸಾಕ್ಷ್ಯ ವಿಚಾರಣೆಯನ್ನು ಪೂರ್ಣಗೊಳಿಸಲಾಗಿದೆ.

**10.** ವಾದಿಗಳ ಮತ್ತು 12ನೇ ಪ್ರತಿವಾದಿಗಳ ಪರ ವಕೀಲರ ವಾದವನ್ನು ಕೇಳಲಾಗಿದೆ. ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಈ ಮೇಲೆ ಹೇಳಿದ ವಿವಾದಾಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಸಲು ದಾವಾ ಸಂಖ್ಯೆ: **37/2015** ರ ವಿವಾದಾಂಶ:

| | | |
|---|---|---|
| ವಿವಾದಾಂಶ **-1** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-2** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-3** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-4** | **-** | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ; |

## <u>Additional Issues framed on 10.12.2018</u>

| | | |
|---|---|---|
| ವಿವಾದಾಂಶ**-1** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |

ಅಸಲು ದಾವಾ ಸಂಖ್ಯೆ: **38/2015** ರ ವಿವಾದಾಂಶ:

| | | |
|---|---|---|
| ವಿವಾದಾಂಶ **-1** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-2** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-3** | **-** | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ**-4** | **-** | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ; |

**Additional Issues framed on 10.12.2018**

| | | |
|---|---|---|
| ವಿವಾದಾಂಶ-1 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |

ಅಸಲು ದಾವಾ ಸಂಖ್ಯೆ: 39/2015 ರ ವಿವಾದಾಂಶ:

| | | |
|---|---|---|
| ವಿವಾದಾಂಶ -1 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-2 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-3 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-4 | - | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ; |

**Additional Issues framed on 10.12.2018**

| | | |
|---|---|---|
| ವಿವಾದಾಂಶ-1 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |

ಅಸಲು ದಾವಾ ಸಂಖ್ಯೆ: 40/2015 ರ ವಿವಾದಾಂಶ:

| | | |
|---|---|---|
| ವಿವಾದಾಂಶ -1 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-2 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-3 | - | ನರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-4 | - | ಸಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-5 | - | ವಿಶ್ಲೇಷಣೆಗೆ ಉದ್ಭವಿಸುವುದಿಲ್ಲ. |
| ವಿವಾದಾಂಶ-6 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |
| ವಿವಾದಾಂಶ-7 | - | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ; |

**Additional Issues framed on 10.12.2018**

| | | |
|---|---|---|
| ವಿವಾದಾಂಶ-1 | - | ನಕಾರಾತ್ಮಕವಾಗಿ ಉತ್ತರಿಸಲಾಗಿದೆ. |

:: ಕಾರಣಗಳು ::

**11.** ಅಸಲು ದಾವಾ ಸಂಖ್ಯೆ: **37/2015** ರಿಂದ **40/2015** ರ ವಿವಾದಾಂಶ: **1** ಹಾಗೂ ಅಧಿಕ ವಿವಾದಾಂಶ**-1:-** ಈ ನಾಲ್ಕೂ ದಾವೆಗಳ ವಿವಾದಾಂಶ-1 ಮತ್ತು ಅಧಿಕ ವಿವಾದಾಂಶ-1, ಒಂದಕ್ಕೊಂದು ಪೂರಕವಾಗಿರುವ ಕಾರಣ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಒಟ್ಟಿಗೆ ವಿಶ್ಲೇಷಣೆ ತೆಗೆದುಕೊಳ್ಳಲಾಗಿದೆ.

ಈ ಮೇಲಿನ 4 ಪ್ರಕರಣಗಳನ್ನು ವಾದಿಯರು ದಾವಾ ಅನುಸೂಚಿ ಸ್ವತ್ತಿನ ಮಾಲೀಕತ್ವದ ಹಕ್ಕು ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಡಿಕ್ರಿ ಪರಿಹಾರ ಕೋರಿ ಸಲ್ಲಿಸಿರುತ್ತಾರೆ.

ನಾಲ್ಕೂ ದಾವೆಗಳ ದಾವಾ ಅನುಸೂಚಿ ಸ್ವತ್ತುಗಳ ವಿವರ ಈ ಕೆಳಗಿನಂತೆ ಇರುತ್ತವೆ.

ಶೆಡ್ಯೂಲ್ ಸ್ವತ್ತುಗಳ ವಿವರ:

1. ಅಸಲು ದಾವಾ ಸಂಖ್ಯೆ:**37/2015**ರ ದಾವೆಯ ವಾದಿಯರು ಹೇಳುವ ಪ್ರಕಾರ,

**An Agricultural land is situated at Helehalli Village, Koppa Hobli, Maddur Taluk, bearing Sy.No.7 totally measuring 20 acres 24 guntas assed. At Rs.28.89 ps. Out of which the Southern 5 acres 27 guntas bounded on:**

| | | |
|---|---|---|
| **East** | **:** | **Shimsha River.** |
| **West** | **:** | **Land of Chikkanna in Sy.No.6.** |
| **North** | **:** | **Land of Raju and Others.** |
| **South** | **:** | **Land of Thimmaiah and Others. Now in possession of Venkatesha and Others.** |

**2. ಅಸಲು ದಾವಾ ಸಂಖ್ಯೆ: 38/2015ರ ದಾವೆಯ ವಾದಿಯರು ಹೇಳುವ ಪ್ರಕಾರ,**

**An Agricultural land is situated at Helehalli Village, Koppa Hobli, Maddur Taluk, bearing Sy.No.7 totally measuring 20 acres 24 guntas assed. At Rs.28.89 ps. Out of which the middle 5 acres 27 guntas bounded on:**

| | | |
|---|---|---|
| **East** | **:** | **Shimsha River.** |
| **West** | **:** | **Land of Chikkanna in Sy.No.6.** |
| **North** | **:** | **Land of Mahalinga and Others.** |
| **South** | **:** | **Land of N. Siddegowda and Others.** |

**3. ಅಸಲು ದಾವಾ ಸಂಖ್ಯೆ: 39/2015ರ ದಾವೆಯ ವಾದಿಯರು ಹೇಳುವ ಪ್ರಕಾರ,**

**An Agricultural land is situated at Helehalli Village, Koppa Hobli, Maddur Taluk, bearing Sy.No.7 totally measuring 20 acres 24 guntas assed. At Rs.28.89 ps. Out of which the Northern 5 acres 27 guntas bounded on:**

| | | |
|---|---|---|
| **East** | **:** | **Shimsha River.** |
| **West** | **:** | **Land of Chikkanna in Sy.No.6.** |
| **North** | **:** | **Kiranguru Yelle** |
| **South** | **:** | **Land of Mahalinga and Others.** |

**4. ಅಸಲು ದಾವಾ ಸಂಖ್ಯೆ: 40/2015ರ ದಾವೆಯ ವಾದಿಯರು ಹೇಳುವ ಪ್ರಕಾರ,**

**An Agricultural land is situated at Helehalli Village, Koppa Hobli, Maddur Taluk, bearing Sy.No.7 totally measuring 20 acres 24 guntas assed. At Rs.28.89 ps. Out of which the middle 2 acres 36 and half guntas bounded on:**

| | | |
|---|---|---|
| **East** | **:** | **Shimsha River.** |
| **West** | **:** | **Land of Chikkanna in Sy.No.6.** |
| **North** | **:** | **Land of H.L. Shankara and Others.** |
| **South** | **:** | **Land of Raju and Others.** |

ಈ ನಾಲ್ಕೂ ಅಸಲು ದಾವೆಯ ವಾದಿಯರು ಹೇಳುವ ಪ್ರಕಾರ ದಾವಾ ಅನುಸೂಚಿ ಸ್ವತ್ತು ಹಳೇಹಳ್ಳಿ ಗ್ರಾಮ, ಸರ್ವೆ ನಂ. 7 ರಲ್ಲಿ ಖರಾಬು ಸೇರಿ 20 ಎಕರೆ 0.24 ಗುಂಟೆ ಜಮೀನು ಮೂಲತಃ ವೆಂಕಟಕೃಷ್ಣಯ್ಯ ಮತ್ತು ಅವರ ಮಕ್ಕಳಿಗೆ ಸೇರಿದ್ದು, ಸದರಿ ಸರ್ವೆ ನಂ. 7 ಜಮೀನು ಮೊದಲು ಹಳೇಹಳ್ಳಿ ಗ್ರಾಮ, ಸರ್ವೆ ನಂ. 6 ಇದ್ದು, ಸದರಿ ಜಮೀನು ವೆಂಕಟ ಕೃಷ್ಣಯ್ಯ ಮತ್ತು ಅವರ ಮಕ್ಕಳಿಂದ ಲಿಂಗ ಅಲಿಯಾಸ್ ಮೊಳ್ಳ, ನಂಜೇಗೌಡ, ಅಣ್ಣಯ್ಯ ಮತ್ತು ನಿಂಗ ರವರುಗಳು ದಿನಾಂಕ 10.10.1905 ರಲ್ಲಿ ಖರೀದಿಸಿರುತ್ತಾರೆ. ಆ ಕಾಲಕ್ಕೆ ಸರ್ವೆ ನಂ. 6 ಹಳೆಯ ಸರ್ವೆ ನಂಬರ್ ಇದು ರೀ ಸರ್ವೆ ಆಗಿ ಸರ್ವೆ ನಂ. 7 ಆಗಿರಲಿಲ್ಲ. ನಂತರ ಸದರಿ ಖರೀದಿದಾರರಾದ 4 ಜನರ ಪೈಕಿ ಅಣ್ಣಯ್ಯ ಇವರು ದಿನಾಂಕ 04.11.1973 ರಲ್ಲಿ ಸಣ್ಣ ನಿಂಗೇಗೌಡ ರವರಿಗೆ ಸ್ವಲ್ಪ ಜಮೀನಿನ ಕ್ರಯಪತ್ರ ಬರೆದುಕೊಟ್ಟಿದ್ದು, ನಂತರ 4 ಜನ ಖರೀದಿದಾರರು ಸೇರಿ ಜಂಟಿಯಾಗಿ ದಿನಾಂಕ 07.06.1926 ರಲ್ಲಿ ನಂಜುಂಡ ರವರಿಗೆ ಕ್ರಯಪತ್ರ ಬರೆದುಕೊಟ್ಟಿದ್ದು, ಸದರಿಯವರು ಸ್ವಾಧೀನಕ್ಕೆ ಬಂದಿರುವುದಿಲ್ಲ. ಹಾಗಾಗಿ 4 ಜನರೂ ಜಮೀನಿನ ಸ್ವಾಧೀನ ಮುಂದುವರೆದುಕೊಂಡು ಬಂದಿರುತ್ತಾರೆ. ಆ ನಂತರದಲ್ಲಿ ಲಿಂಗ ಅಲಿಯಾಸ್ ಮೊಳ್ಳ ಮತ್ತು ಇತರೆ 3 ಜನ ಖರೀದಿದಾರರು ಸೇರಿಕೊಂಡು 20 ಎಕರೆ 24 ಗುಂಟೆ ಜಮೀನನ್ನು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ಆ ರೀತಿ ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು ಲಿಂಗ ಅಲಿಯಾಸ್ ಮೊಳ್ಳರವರಿಗೆ ಬಂದಿರುತ್ತದೆ. ಈ ಕೇಸುಗಳ ವಾದಿಗಳು ಲಿಂಗ ಅಲಿಯಾಸ್ ಮೊಳ್ಳ ರವರ ವಾರುದಾರರಾಗಿರುತ್ತಾರೆ ಮತ್ತು ಅವರ ವಾರಸುದಾರರಾಗಿ ದಾವಾ ಅನುಸೂಚಿ ಸ್ವತ್ತನ್ನು ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ದಾವಾ ಸ್ವತ್ತನ್ನು ಲಿಂಗ ಅಲಿಯಾಸ್ ಮೊಳ್ಳ ರವರಾಗಲೀ, ಅವರ ವಾರಸುದಾರರಾಗಲೀ, ಮರಿಯಕ್ಕ ಮತ್ತು ಚಿಕ್ಕನಂಜುಂಡ ಎಂಬುವವರಿಗೆ 20 ಎಕರೆ 0.24 ಗುಂಟೆ ಜಮೀನನ್ನು ಮಾರಾಟ ಮಾಡಿರುವುದಿಲ್ಲ, ಆದಾಗ್ಯೂ ರೆವಿನ್ಯೂ ಅಧಿಕಾರಿಗಳ ಜೊತೆ

ಶಾಮೀಲಾಗಿ ಅವರ ಹೆಸರಿಗೆ ರೆವಿನ್ಯೂ ದಾಖಲಾತಿಗಳನ್ನು ಮಾಡಿಸಿಕೊಂಡಿದ್ದು, ಸದರಿ ವಿಚಾರ 2001ನೇ ಇಸವಿಯಲ್ಲಿ ತಿಳಿದುಬಂದಿರುತ್ತದೆಂದೂ, ನಂತರ ಸದರಿ ಖಾತಾ ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಪ್ರಶ್ನಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸಬೇಕೆಂದು ಆದೇಶ ನೀಡಿದ ಮೇರೆಗೆ ಮಂಡ್ಯ ಉಪ ವಿಭಾಗಾಧಿಕಾರಿಗಳ ಮುಂದೆ ಅಪೀಲು ಸಲ್ಲಿಸಿದ್ದು, ಅದು ವಜಾ ಆಗಿರುತ್ತದೆ. ನಂತರ ಅದನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಅದೂ ವಜಾ ಆಗಿರುತ್ತದೆ. ಸದರಿ ಅಪೀಲುಗಳು ವಜಾ ಆದ ಬಳಿಕ ಪ್ರತಿವಾದಿಯರು ಅದರ ದುರ್ಲಾಭ ಪಡೆದು ದಾವಾ ಅನುಸೂಚಿ ಸ್ವತ್ತಿನ ವಾದಿಯರ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿ 12 ರವರಿಗೆ ಯಾವುದೇ ಹಕ್ಕು, ಹಿತಾಸಕ್ತಿ, ಸ್ವಾಧೀನವೂ ಇರುವುದಿಲ್ಲ. 12ನೇ ಪ್ರತಿವಾದಿಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ. ಸದರಿ ಕ್ರಯ ವಾದಿಯರುಗಳ ಹಕ್ಕನ್ನು ಬದ್ಧಪಡಿಸುವುದಿಲ್ಲವೆಂದು ಹೇಳಿರುತ್ತಾರೆ.

**12.** ಪ್ರತಿಯಾಗಿ, ಪ್ರತಿವಾದಿ 12 ರವರ ಪ್ರಕಾರ, ಹಳೇಹಳ್ಳಿ ಗ್ರಾಮ ಸರ್ವೆ ನಂ. 7 ಒಟ್ಟು 26 ಎಕರೆ 0.01 ಗುಂಟೆ ವಿಸ್ತೀರ್ಣವಿರುತ್ತದೆ. ಆ ಪೈಕಿ 0.12 ಗುಂಟೆ ಎ ಖರಾಬು ಮತ್ತು 1 ಎಕರೆ 0.33 ಗುಂಟೆ ಬಿ ಖರಾಬು ಇರುತ್ತದೆ. ವ್ಯವಸಾಯದ ಜಮೀನು ಒಟ್ಟು 23 ಎಕರೆ 0.36 ಗುಂಟೆ ವಿಸ್ತೀರ್ಣವಿರುತ್ತದೆ. ಸದರಿ ಸ್ವತ್ತು ಪುಟ್ಟೇಗೌಡ ರವರ ಪಿತ್ರಾರ್ಜಿತವಾದ ಜಮೀನು ಆಗಿದ್ದು, ಅವರಿಗೆ ದೊಡ್ಡ ನಂಜುಂಡ ಮತ್ತು ಚಿಕ್ಕ ನಂಜುಂಡ ಎಂಬ ಇಬ್ಬರು ಮಕ್ಕಳಿದ್ದು, ದೊಡ್ಡ ನಂಜುಂಡರವರು ಮರಿಯಕ್ಕನನ್ನು ವಿವಾಹವಾಗಿರುತ್ತಾರೆ. ನಂಜುಂಡಯ್ಯ ನಂಜಮ್ಮ ರವರನ್ನು ವಿವಾಹವಾಗಿರುತ್ತಾರೆ. ಸದರಿ ದೊಡ್ಡ ನಂಜುಂಡಪ್ಪರವರಿಗೆ ನಂಜಮ್ಮ ಸಣ್ಣಮ್ಮ ಮತ್ತು ನಿಂಗಮ್ಮ ಎಂಬ ಮೂವರು ಮಕ್ಕಳು ಮತ್ತು ಚಿಕ್ಕ ನಂಜುಂಡ ರವರಿಗೆ ನಂಜಪ್ಪ ಅಲಿಯಾಸ್ ಸುಬ್ಬಣ್ಣ ಎಂಬ ಮಗ

ಇದ್ದರು. 13ನೇ ಪ್ರತಿವಾದಿಯ ಬೋರೇಗೌಡ ರವರು ನಂಜಮ್ಮ ಮತ್ತು ಬೋರೇಗೌಡರ ಒಬ್ಬ ಮಗನಾಗಿದ್ದು, ಸದರಿಯವರನ್ನು ದಿನಾಂಕ 24.10.1951 ರಂದು ಸಣ್ಣಮ್ಮ ಅಲಿಯಸ್ ಲಿಂಗಮ್ಮ ಮತ್ತು ಮರಿಗೌಡರಿಗೆ ದತ್ತು ನೀಡಿರುತ್ತಾರೆ. ಚಿಕ್ಕನಂಜುಂಡಿ ರವರ ಮಗ ನಂಜಪ್ಪ ಅಲಿಯಾಸ್ ಸುಬ್ಬಣ್ಣ ರವರು ದಿನಾಂಕ 05.07.1965 ರಲ್ಲಿ ಸರ್ವೆ ನಂ. 7 ರಲ್ಲಿ 2 ಎಕರೆ .020 ಗುಂಟೆ ಜಮೀನನ್ನು ಕೆಂಪೇಗೌಡ ಬಿನ್ ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕ 20.05.1967 ರಲ್ಲಿ ಸಣ್ಣಮ್ಮನ ದತ್ತು ಮಗ ಬೋರೇಗೌಡ ಸರ್ವೆ ನಂ. 7 ರಲ್ಲಿ 2 ಎಕರೆ 0.07 ಗುಂಟೆ ಜಮೀನು ಚಿಕ್ಕು ಬಿನ್ ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ದಿನಾಂಕ 08.09.2014 ರಂದು 13 ರಿಂದ 17ನೇ ಪ್ರತಿವಾದಿಯರು ಸರ್ವೆ ನಂ. 7 ರಲ್ಲಿ 1 ಎಕರೆ 0.33 ಗುಂಟೆ ಖರಾಬು ಜಮೀನನ್ನು ಸೇರಿಸಿ ಒಟ್ಟು 21 ಎಕರೆ 0.02 ಗುಂಟೆ ಜಮೀನನ್ನು 12ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ 12ನೇ ಪ್ರತಿವಾದಿ ಸರ್ವೆ ನಂ. 7 ರ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ. ಮುಂದುವರೆದು, ಲಿಂಗ, ನಿಂಗ ಮತ್ತು ಅಣ್ಣಯ್ಯ ಇವರು ಹಳೇಹಳ್ಳಿ ಗ್ರಾಮ ಸರ್ವೆ ನಂ. 7ರ ಮಾಲೀಕರಾಗಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಯಾವುದೇ ಸ್ವಾಧೀನವೂ ಇರುವುದಿಲ್ಲ. ಆದಾಗ್ಯೂ ದಿನಾಂಕ 04.11.1943 ರಲ್ಲಿ ಸಣ್ಣನಿಂಗೇಗೌಡರವರಿಗೆ ಸರ್ವೆ ನಂ. 7 ರಲ್ಲಿ 2 ಎಕರೆ 0.36 ಗುಂಟೆ ಮಾರಾಟ ಮಾಡಿದ್ದು, ಸದರಿ ಕ್ರಯಪತ್ರವು ಶೂನ್ಯ ದಾಖಲಾತಿಯಾಗಿರುತ್ತದೆಂದೂ ನಿಲುವು ತೆಗೆದುಕೊಂಡಿರುತ್ತಾರೆ.

**13.** ವಾದಿಯರು ಈ ದಾವೆಯನ್ನು ದಾವಾ ಅನುಸೂಚಿ ಸ್ವತ್ತಿನ ಹಳೇ ಸರ್ವೆ ನಂ.6 ಇದು ರೀ ಸರ್ವೆಯಾಗಿ ಸರ್ವೆ ನಂ. 7 ಎಂದೂ ಮತ್ತು ಸದರಿ ಸರ್ವೆ ನಂ. 7 ಸ್ವತ್ತಿನ ಮಾಲೀಕತ್ವದ ಹಕ್ಕು ಕೋರಿ ಸಲ್ಲಿಸಿರುವುದರಿಂದ ದಾವಾ ಅನುಸೂಚಿ ಸ್ವತ್ತಿನ ಸರ್ವೆ ನಂಬರ್, ಚೆಕ್ಕುಬಂದಿ ಮತ್ತು ಸದರಿ ಸ್ವತ್ತು ತಮ್ಮ ಮಾಲೀಕತ್ವ ಮತ್ತು ಸ್ವಾಧೀನದಲ್ಲಿರುತ್ತದೆ ಎಂಬುದನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101ರ

ಪ್ರಕಾರ ಸೂಕ್ತ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳಿಂದ ಸಾಭೀತುಪಡಿಸುವ ಪ್ರಾಥಮಿಕ ಹೊಣೆಗಾರಿಕೆ ವಾದಿಯರುಗಳ ಮೇಲೆಯೇ ಇರುತ್ತದೆ. ಅದರಂತೆ ಅಸಲು ದಾವಾ ಸಂಖ್ಯೆ: 37/2015 ದಾವೆಯ 2ನೇ ವಾದಿ ಹೆಚ್.ಎನ್. ಮಹಾಲಿಂಗ ರವರು ಸ್ವತಃ ಪಿಡಬ್ಲ್ಯೂ-1 ಎಂದೂ, ಅಸಲು ದಾವಾ ಸಂಖ್ಯೆ: 38/2015 ರ ವಾದಿ ರಾಜು ಹೆಚ್. ರವರು ಪಿಡಬ್ಲ್ಯೂ-2 ಎಂದೂ, ಅಸಲು ದಾವಾ 39/2015 ರ 3ನೇ ವಾದಿ ಶಿವನಂಜೇಗೌಡ ರವರು ಪಿಡಬ್ಲ್ಯೂ-3 ಎಂದೂ, ಇವರ ಸಾಕ್ಷ್ಯವನ್ನು ದಿನಾಂಕ 16.07.2022 ರ ಆದೇಶದಂತೆ ರದ್ದುಗೊಳಿಸಲಾಗಿದೆ, ಆನಂತರ ಇವರ ಜಿ.ಪಿ.ಎ. ಹೋಲ್ಡರ್ ಆಗಿ ಅಸಲು ದಾವಾ ಸಂಖ್ಯೆ: 40/2015 ರ 3ನೇ ವಾದಿಯ ಕಾನೂನುಬದ್ಧ ವಾರಸುದಾರ 3(ಡಿ) ಸಂತೋಷ ಹೆಚ್.ಎನ್. ರವರು ಪಿಡಬ್ಲ್ಯೂ-5 ಎಂದೂ, ಹಾಗೂ ಅವರ ಪರ ಸಾಕ್ಷ್ಯದಾರರಾಗಿ ಶಿವರಾಜು ಹೆಚ್.ಆರ್. ರವರು ಪಿಡಬ್ಲ್ಯೂ-4 ಎಂದೂ, ಪುಟ್ಟಸ್ವಾಮಿ ರವರು ಪಿಡಬ್ಲ್ಯೂ-6 ಎಂದೂ ಸಾಕ್ಷ್ಯ ನುಡಿದಿರುತ್ತಾರೆ.

**14.** ಅಸಲು ದಾವಾ ಸಂಖ್ಯೆ: 37/2015 ರ ಪಿಡಬ್ಲ್ಯೂ-1 ಹೆಚ್. ಎಂ. ಮಹಲಿಂಗಯ್ಯ ಬಿನ್ ಲೇಟ್ ಎನ್. ಲಿಂಗೇಗೌಡ ರವರು ತಮ್ಮ ಸಾಕ್ಷ್ಯ ವಿಚಾರಣೆ ವೇಳೆ ರೀಸರ್ವೆ ಟಿಪ್ಪಣಿಯ ನಕಲು ಹಾಜರುಪಡಿಸಿ ಅದನ್ನು ನಿಪಿ-1 ಎಂದೂ, ರೀ ಸರ್ವೆ ಟಿಪ್ಪಣಿಯ ಅನುವಾದ ನಿಪಿ-1(ಎ) ಎಂದೂ, ನೋಂದಾಯಿತ ಪಾಲು ವಿಭಾಗ ಪತ್ರದ ಧೃಡಿಕೃತ ನಕಲು ಮತ್ತು ಅನುವಾದವನ್ನು ಹಾಜರು ಪಡಿಸಿ ಅದನ್ನು ನಿಪಿ-2 ಮತ್ತು ನಿಪಿ-2(ಎ) ಎಂದೂ, 3 ಕ್ರಯಪತ್ರಗಳ ದೃಢೀಕೃತ ನಕಲನ್ನು ಹಾಜರುಪಡಿಸಿ ಅವುಗಳನ್ನು ನಿಪಿ-3 ರಿಂದ ನಿಪಿ-5 ಎಂದೂ, 23 ಕಂದಾಯ ರಶೀದಿಗಳನ್ನು ಹಾಜರುಪಡಿಸಿ ಒಟ್ಟಾಗಿ ನಿಪಿ-6 ಎಂದೂ, ಋಣಭಾರ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ-7 ಎಂದೂ, ದಿನಾಂಕ 04.10.1915 ರ ಭೋಗ್ಯದ ದೃಢೀಕೃತ ನಕಲು ಮತ್ತು ಅನುವಾದವನ್ನು ಹಾಜರುಪಡಿಸಿ ಅವುಗಳನ್ನು ನಿಶಾನೆ ಪಿ-8 ಮತ್ತು ನಿಶಾನೆ ಪಿ-8(ಎ) ಎಂದೂ, ದಿನಾಂಕ

21.12.1923 ರ ಕ್ರಯ ಪತ್ರದ ದೃಢೀಕೃತ ನಕಲು ಮತ್ತು ಅನುವಾದ ಗಳನ್ನು ಹಾಜರುಪಡಿಸಿ ಅವುಗಳನ್ನುನಿಶಾನೆ ಪಿ-9 ಮತ್ತು 9(ಎ) ಎಂದೂ, ಆರ್.ಟಿ.ಸಿ. ಗಳನ್ನು ನಿಶಾನೆ ಪಿ-10 ಮತ್ತು 11 ಎಂದೂ, ಇ.ಸಿ. ಯನ್ನು ನಿಪಿ-12 ಎಂದೂ, ಸರ್ವೆ ನಂ. 7 ರ ಆರ್.ಆರ್. ದೃಢೀಕೃತ ನಕಲನ್ನು ನಿಪಿ-13 ಎಂದೂ, ಸರ್ವೆ ನಂ. 7 ರ 5 ಆರ್.ಟಿ.ಸಿ. ಗಳನ್ನು ನಿಪಿ-14 ರಿಂದ ನಿಪಿ-18 ಎಂದೂ, ಆರ್.ಟಿ.ಸಿ.ಯನ್ನು ನಿಪಿ-19 ಎಂದೂ, ಟಿಪ್ಪಣಿ ಕಾಫಿಯ ದೃಢೀಕೃತ ನಕಲನ್ನು ನಿಪಿ-20 ಎಂದೂ ಅದರ ಅನುವಾದವನ್ನು ನಿಪಿ-20 (ಎ) ಎಂದೂ, ದಿನಾಂಕ 25.06.1902 ರ ವಿಭಾಗ ಪತ್ರದ ದೃಢೀಕೃತ ನಕಲನ್ನು ನಿಪಿ-21 ಎಂದೂ, ಅದರ ಬೆರಳಚ್ಚು ನಕಲನ್ನು ನಿಪಿ-21(ಎ) ಎಂದೂ, ದಿನಾಂಕ 02.11.1905 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-22 ಎಂದೂ, ದಿನಾಂಕ 16.02.1906 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-23 ಎಂದೂ, 1947 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-24 ಎಂದೂ, ಕಂದಾಯ ರಶೀದಿಯ ದೃಢೀಕೃತ ನಕಲನ್ನು ನಿಪಿ-25 ಎಂದೂ, ಇ.ಸಿ. ಯನ್ನು ನಿಪಿ-26 ಎಂದೂ, ಭೋಗ್ಯಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಪ್ರತಿಯನ್ನು ನಿಪಿ-27 & 27(a) ಎಂದೂ, ಖರೀದಿ ಪತ್ರದ ಮತ್ತು ಬೆರಳಚ್ಚು ಪ್ರತಿಯ ದೃಢೀಕೃತ ನಕಲನ್ನು ನಿಪಿ-28 & 28(a) ಎಂದೂ, ಆರ್.ಟಿ.ಸಿ. ಯನ್ನು ನಿಪಿ-29 ಎಂದೂ, ಆರ್.ಆರ್. ನಕಲಿನ ದೃಢೀಕೃತ ನಕಲನ್ನು ನಿಪಿ-30 ಎಂದೂ, ಆರ್.ಟಿ.ಸಿ. ಗಳನ್ನು ನಿಪಿ-31 to 37 ಎಂದೂ ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ.

ನಂತರ ಅಸಲು ದಾವಾ ಸಂಖ್ಯೆ: 39/2015 ರ 3ನೇ ಪ್ರತಿವಾದಿಯವರಾದ ಶಿವನಂಜೇಗೌಡ ರವರು ಪಿಡಬ್ಲ್ಯೂ-3 ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿಯವರು 19 ದಾಖಲಾತಿಗಳನ್ನು ಹಾಜರುಪಡಿಸಿ, ಅವುಗಳನ್ನು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ನಂತರ ದಿನಾಂಕ 16.07.2022 ರ ಈ ನ್ಯಾಯಾಲಯದ ಆದೇಶದ ಪ್ರಕಾರ ಸದರಿ ಪಿಡಬ್ಲ್ಯೂ-3 ಶಿವಲಿಂಗೇಗೌಡರ

ಸಾಕ್ಷ್ಯವನ್ನು ರದ್ದುಗೊಳಿಸಲಾಗಿ (Discarded) ನಂತರ ಅವರ ಜಿ.ಪಿ.ಎ. ಹೋಲ್ಡರ್ ಶಿವರಾಜು ರವರು ಪಿಡಬ್ಲ್ಯೂ-4 ಎಂದು ಸಾಕ್ಷ್ಯ ವಿಚಾರಣೆ ನೀಡಿದ್ದು, ಸದರಿಯವರ ಮೂಲಕ ನಿಪಿ-38 ರಿಂದ ನಿಪಿ-49 ದಾಖಲಾತಿಗಳನ್ನು ನಿಶಾನೆಗಳಾಗಿ ಗುರ್ತಿಸಿಕೊಳ್ಳಲಾಗಿರುತ್ತದೆ. ನಂತರ ಅಸಲು ದಾವಾ ಸಂಖ್ಯೆ: 40/2015 ರ 3ನೇ ವಾದಿಯ ಕಾನೂನುಬದ್ಧ ವಾರಸುದಾರರಾದ ಸಂತೋಷ್ ಹೆಚ್.ಎನ್. ಬಿನ್ ಲೇಟ್ ಹೆಚ್.ಕೆ. ನಿಂಗೇಗೌಡ ರವರು ಪಿಡಬ್ಲ್ಯೂ-5 ಎಂದು ಸಾಕ್ಷ್ಯ ನುಡಿದು, ತಮ್ಮ ಪರ ನಿಪಿ-59 ರಿಂದ ನಿಪಿ-73 ದಾಖಲಾತಿಗಳನ್ನು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ.

**15.** ಅಸಲು ದಾವಾ ಸಂಖ್ಯೆ: 37/2015 ರಿಂದ 40/2015 ರ ದಾವೆಯ ವಾದಿಯವರುಗಳು ಲಿಂಗ ಅಲಿಯಾಸ್ ಮೊಳ್ಳ ರವರ ಕುಟುಂಬದ ಸದಸ್ಯರುಗಳಾಗಿರುತ್ತಾರೆಂದೂ, ಈ 4 ಪ್ರಕರಣದ ದಾವಾ ಅನುಸೂಚಿ ಸ್ವತ್ತು ಒಂದೇ ಆಗಿದ್ದು, ಸದರಿ ಸ್ವತ್ತು ತಮ್ಮ ಮಾಲೀಕತ್ವದಲ್ಲಿ ಮತ್ತು ಸ್ವಾಧೀನಾನುಭವದಲ್ಲಿರುವುದಾಗಿ ಮಾಲೀಕತ್ವದ ಹಕ್ಕು ಘೋಷಣೆ ಮತ್ತು ಸದರಿ ಸ್ವತ್ತಿನ ಶಾಂತಿಯುತ ಅನುಭೋಗಕ್ಕೆ ಪ್ರತಿವಾದಿಯರು ಯಾವುದೇ ರೀತಿ ಅಡ್ಡಿಪಡಿಸದಂತೆ ಘೋಷಣಾತ್ಮಕ ಡಿಕ್ರಿ ಕೋರಿ ಈ ದಾವೆಯಗಳನ್ನು ಹೂಡಿರುತ್ತಾರೆ. ಸದರಿ ನಾಲ್ಕು ದಾವೆಗಳ ವಸ್ತು ವಿಷಯ ಮತ್ತು ಪಕ್ಷಗಾರರು ಮತ್ತು ಕೋರಿರುವ ಪರಿಹಾರ ಒಂದೇ ಆಗಿರುವ ಕಾರಣ, ದಿನಾಂಕ 16.07.2022 ರ ಈ ನ್ಯಾಯಾಲಯದ ಆದೇಶದನ್ವಯ ಒಟ್ಟಿಗೆ ಸೇರಿಸಿ, ಅಸಲು ದಾವಾ 37/2015 ನ್ನು ಮುಖ್ಯ ದಾವೆಯಾಗಿ ಪರಿಗಣಿಸಿ ಅಸಲು ದಾವಾ ಸಂಖ್ಯೆ: 38/2015, 39/2015 ಮತ್ತು ಅಸಲು ದಾವಾ ಸಂಖ್ಯೆ: 40/2015 ನ್ನು ಆ ದಾವೆಯ ಜೊತೆ ಸೇರಿಸಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ.

**16.** ಪಿಡಬ್ಲ್ಯೂ-1 ರಿಂದ 5 ರವರು ಹಾಜರುಪಡಿಸಿರುವ ದಾಖಲಾತಿಗಳೆಲ್ಲವೂ ಒಂದೇ ದಾಖಲಾತಿಗಳಾಗಿರುತ್ತವೆ. ಹಾಗಾಗಿ ಪಿಡಬ್ಲ್ಯೂ-1 ರವರು ಹಾಜರುಪಡಿಸಿರುವ ದಾಖಲಾತಿಗಳನ್ನು ಈ ದಾವೆಯಲ್ಲಿ ವಿಶ್ಲೇಷಣೆಗೆ ಪರಿಗಣಿಸಲಾಗಿರುತ್ತದೆ.

**17.** ಪಿಡಬ್ಲ್ಯೂ-1 ರವರು ಹಾಜರುಪಡಿಸಿರುವ ನಿಪಿ-1 ರೀ-ಸರ್ವೆ ಟಿಪ್ಪಣಿ ಪರಿಶೀಲಿಸಿದಾಗ, ಹಳೇಹಳ್ಳಿ ಗ್ರಾಮದ ಸರ್ವೆ ನಂ. 6 ಇವರ ರೀ-ಸರ್ವೆ ನಂ. 7 ಎಂಬುದಾಗಿ ನಮೂದಿರುವುದು ಕಂಡುಬರುತ್ತದೆ. ನಿಪಿ-2 ದಿನಾಂಕ 21.10.1902 ರ ನೋಂದಾಯಿತ ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ಪರಿಶೀಲಿಸಿದಾಗ, ವೆಂಕಟರಾಮಯ್ಯ ಮತ್ತು ಅವರ ಮಕ್ಕಳ ನಡುವೆ ವಿಭಾಗವಾಗಿದ್ದು, ಸದರಿ ದಾಖಲಾತಿಯಲ್ಲಿ ಸರ್ವೆ ನಂ. 6 ರ ಮೂಲ ಮಾಲೀಕರಾದ ವೆಂಕಟರಾಮಯ್ಯ ರವರ ಮಕ್ಕಳಾದ ಸುಬ್ಬರಾಯನ ಹಿಸ್ಸೆಗೆ ಸರ್ವೆ ನಂ. 6 ರಲ್ಲಿ 20 ಎಕರೆ 0.24 ಗುಂಟೆ ಬಂದಿರುವುದಾಗಿ, ಇದರ ಪೂರ್ವಕ್ಕೆ ನದಿ, ಪಶ್ಚಿಮಕ್ಕೆ- ನರಸಿಂಹಗಿರಿ ತಿಮ್ಮನ ಪಟ್ಟಾ ವಗ್ಯೆರೇ ಜಮೀನು, ದಕ್ಷಿಣಕ್ಕೆ ಗಿರಿಯಪ್ಪನ ಹೊಲ, ಉತ್ತರಕ್ಕೆ ಕಿರಂಗೂರು ಎಲ್ಲೆ ಮತ್ತು ಜವರನ ಜಮೀನು ಎಂದು ಚೆಕ್‌ಬಂದಿ ನಮೂದಿಸಲಾಗಿರುತ್ತದೆ. ನಿಪಿ-3ನ್ನು ಪರಿಶೀಲಿಸಿದಾಗ ಲಿಂಗ ಅಲಿಯಾಸ್ ಮೊಳ್ಳ, ನಿಂಗ, ಅಣ್ಣಯ್ಯ ಮತ್ತು ನಂಜೇಗೌಡ ಈ 4 ಜನ ಸೇರಿ ಸರ್ವೆ ನಂ. 6 ರಲ್ಲಿ 20 ಎಕರೆ 0.24 ಖರೀದಿಸಿರುವುದಾಗಿ ಕಂಡುಬರುತ್ತದೆ. ನಿಪಿ-7 ಋಣಬಾರ ರಾಹಿತ್ಯ ಪ್ರಮಾಣ ಪತ್ರವಾಗಿದ್ದು, ಸರ್ವೆ ನಂ. 6 ರಲ್ಲಿ 20 ಎಕರೆ 0.24 ಗುಂಟೆ ವೆಂಕಟರಾಮಯ್ಯ ಸುಬ್ಬರಾಯ ರವರಿಂದ ದಿನಾಂಕ 10.10.2005 ರಂದು ಲಿಂಗ ಅಲಿಯಾಸ್ ಮೊಳ್ಳ, ನಿಂಗ, ಅಣ್ಣಯ್ಯ ಮತ್ತು ನಂಜೇಗೌಡ ರವರಿಗೆ ಕ್ರಯವಾಗಿರುವ ಬಗ್ಗೆ ನಮೂದಾಗಿರುವುದು ಕಂಡುಬರುತ್ತದೆ. ನಿಪಿ-8 ದಿನಾಂಕ 04.10.1915 ರ ಭೋಗ್ಯ ಪತ್ರವಾಗಿದ್ದು, ಲಿಂಗ ಅಲಿಯಾಸ್ ಮೊಳ್ಳ, ನಿಂಗ, ಅಣ್ಣಯ್ಯ ಮತ್ತು ನಂಜೇಗೌಡ ಈ 4 ಜನ ಖರೀದಿದಾರರಲ್ಲಿ ಒಬ್ಬರಾದ ಅಣ್ಣೇಗೌಡ ರವರು ಸರ್ವೆ ನಂ. 6 ರಲ್ಲಿ ಲಿಂಗೇಗೌಡ ಅಲಿಯಾಸ್

ಮೊಳ್ಳೇಗೌಡ ಬಿನ್ ಬುಡ್ಡೇಗೌಡನಿಂದ ರೂ.130 ಸಾಲ ಪಡೆದು 3 ಎಕರೆ 0.20 ಗುಂಟೆ ಜಮೀನಿಗೆ ಬೋಗ್ಯ ಪತ್ರ ಬರೆದುಕೊಟ್ಟು ಸ್ವಾಧೀನ ಬಿಟ್ಟುಕೊಟ್ಟಿರುವುದಾಗಿ ಕಂಡುಬರುತ್ತದೆ. ನಿಪಿ-9 ದಿನಾಂಕ 21.12.1923 ರ ಕ್ರಯಪತ್ರವಾಗಿದ್ದು, 4 ಜನ ಖರೀದಿದಾರರಲ್ಲಿ ಮೊಳ್ಳೇಗೌಡರ ಮಗ ನಿಂಗೇಗೌಡ ಇವರು ಕೆಂಪೇಗೌಡ ಬಿನ್ ನಿಂಗೇಗೌಡ ರವರಿಗೆ ರೀ-ಸರ್ವೆ ನಂ. 6 ನೇಯದಕ್ಕೆ ಮಾರಾಟ ಮಾಡಿ ಜಮೀನನ್ನು ಸಹ ಅವರು ಸುಪರ್ಧಿಗೆ (ವಶಕ್ಕೆ) ಬಿಟ್ಟುಕೊಟ್ಟಿರುವುದಾಗಿ ನಮೂದಿರುತ್ತದೆ. ನಿಪಿ-12 ದಿನಾಂಕ 01.04.1907 ರಿಂದ 31.03.2024 ರವರೆಗಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರವಾಗಿದ್ದು, ದಿನಾಂಕ 21.12.1923 ರಂತೆ ಕ್ರಯದ ಪ್ರಕಾರ ಸರ್ವೆ ನಂ.7 ರಲ್ಲಿ 4 ಎಕರೆ 0.25 ಗುಂಟೆ ಪೈಕಿ 5/6th ಭಾಗದ ಜಮೀನು ಕ್ರಯ ಎಂದು ನಮೂದಿರುತ್ತದೆ. ಪಿಡಬ್ಲ್ಯೂ-2 ರವರು ಹಾಜರುಪಡಿಸಿರುವ ನಿಪಿ-31 ಆರ್.ಟಿ.ಸಿ. ಸರ್ವೆ ನಂ. 7 ರಲ್ಲಿ 0.01 ಗುಂಟೆ ಕೆಂಪೇಗೌಡ ಬಿನ್ ಲಿಂಗೇಗೌಡರ ಹೆಸರಿಗೆ ಎಂ.ಆರ್. 190/1965-66 ರಂತೆ ನಮೂದಾಗಿ ಆರ್.ಟಿ.ಸಿ. ಬಂದಿರುತ್ತದೆ. ನಿಶಾನೆ ಪಿ-32 ಪ್ರಕಾರ ಸರ್ವೆ ನಂ. 7 ರಲ್ಲಿ 0.87 ಗುಂಟೆಗೆ ಅಂಕ ಅಲಿಯಾಸ್ ಚಿಕ್ಕೋನು ಬಿನ್ ಅಂಕೇಗೌಡರಿಗೆ ಕ್ರಯ ಎಂ.ಆರ್.ನಂ.47/5395/1966-67 ರಂತೆ ಆರ್.ಟಿ.ಸಿ. ಇರುತ್ತದೆ.

**18.** ಈಗಾಗಲೇ ಈ ಮೇಲೆ ವಿವರಿಸಿರುವ ಪ್ರಕಾರ ವಾದಿಯರು 4 ದಾವೆಗಳನ್ನು ದಾವಾ ಅನುಸೂಚಿ ಸ್ವತ್ತಿನ ಹಕ್ಕು ಘೋಷಣೆ ಕೋರಿ ಸಲ್ಲಿಸಿರುವುದರಿಂದ ದಾವಾ ಅನುಸೂಚಿ ಸ್ವತ್ತು ತಮಗೆ ಸೇರಿರುತ್ತವೆಂದು ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸುವ ಮೂಲಕ ಪುರಾವೆ ಮಾಡುವ ಜಬಾಬ್ದಾರಿ ವಾದಿಯರ ಮೇಲೆಯೇ ಇರುತ್ತದೆ. ಪ್ರಸ್ತುತ ದಾವಾ ಅನುಸೂಚಿ ಸ್ವತ್ತು ವಾದಿಯರ ಹೆಸರಿನಲ್ಲಿರುವ ಕುರಿತಾದ ಯಾವುದೇ ಮೂಲ ದಾಖಲಾತಿಗಳನ್ನೂ ಪಿಡಬ್ಲ್ಯೂ-1 ರಿಂದ ಪಿಡಬ್ಲ್ಯೂ-5 ರವರು ಹಾಜರುಪಡಿಸಿರುವುದಿಲ್ಲ.

**19.** ಪಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ಲಿಂಗ ಅಲಿಯಾಸ್ ಮೊಳ್ಳ ಮತ್ತು ಉಳಿದ 3 ಜನ ಖರೀದಿದಾರರು, ದಿನಾಂಕ 29.03.1906 ರಂದು ಲಿಂಗ ಅಲಿಯಾಸ್ ಕೋನ ರವರಿಗೆ 3 ಎಕರೆ 0.24 ಗುಂಟೆ ಜಮೀನಿನ ಕ್ರಯ ಪತ್ರ ಮಾಡಿಕೊಟ್ಟಿದ್ದು, ಆ ಕಾಲಕ್ಕೆ ಹಳೇ ಸರ್ವೆ ನಂ. 6 ಇನ್ನೂ ರೀ-ಸರ್ವೆ ನಂ. 7 ಆಗಿರಲಿಲ್ಲವೆಂದೂ, ಸದರಿ ಕ್ರಯಪತ್ರದ ಮೂಲಕ ಯಾವುದೇ ಸ್ವಾಧೀನ ಬಿಟ್ಟು ಕೊಟ್ಟಿರಲಿಲ್ಲವೆಂದೂ, ಬದಲಾಗಿ 4 ಜನ ಖರೀದಿದಾರರ ಬಳಿಯೇ ಸ್ವಾಧೀನವನ್ನು ಉಳಿಸಿಕೊಂಡಿದ್ದರೆಂದೂ, ಕಾರಣ ಸದರಿ ಕ್ರಯಪತ್ರ ಸಾಲದ ಭದ್ರತೆಗಾಗಿ ಮಾಡಿಕೊಟ್ಟಿದಂತಹ ನಾಮಿನಲ್ ಪತ್ರವೆಂದು ಹೇಳುತ್ತಾರೆ. ಪಿಡಬ್ಲ್ಯೂ-1 ರವರು ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ಆ ನಂತರ ಅಣ್ಣೇಗೌಡರವರು ಲಿಂಗೇಗೌಡ ರವರಿಂದ ಹಣವನ್ನು ಸಾಲವಾಗಿ ಪಡೆದು 24 ಎಕರೆ 0.24 ಗುಂಟೆ ಪೈಕಿ ಸ್ವಲ್ಪ ಭಾಗವನ್ನು ಭೋಗ್ಯದ ಪತ್ರ ಬರೆದುಕೊಟ್ಟಿದ್ದು, ಆದರೆ ಸ್ವಾಧೀನವನ್ನು ಮಾತ್ರ 4 ಜನ ಖರೀದಿದಾರರು ಉಳಿಸಿಕೊಂಡಿದ್ದಾರೆಂದೂ, ಆ ನಂತರ ಅಣ್ಣೇಗೌಡ ಭೋಗ್ಯವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತಾರೆಂದು ಹೇಳುತ್ತಾರೆ. ಪಿಡಬ್ಲ್ಯೂ-1 ರವರು ಪುನಃ ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ, ಆ ನಂತರ 4 ಜನ ಖರೀದಿದಾರರೂ ಸೇರಿ ದಿನಾಂಕ 21.12.1923 ರಂದು ಲಿಂಗೇಗೌಡ ಕೋನಿಗೌಡ ರವರಿಗೆ ನಾಮಮಾತ್ರ ಕ್ರಯಪತ್ರ ಮಾಡಿಕೊಟ್ಟಿದ್ದು, ಆ ವೇಳೆಗಾಗಲೇ ಸರ್ವೆ ನಂ. 6 ಇದು ಸರ್ವೆ ನಂ. 7 ಆಗಿದ್ದರಿಂದ ಕ್ರಯಪತ್ರದಲ್ಲಿ ಸರ್ವೆ ನಂ.7 ಎಂದು ನಮೂದಿಸಿದ್ದು, ಆದರೆ ಸ್ವಾಧೀನವನ್ನು ಮಾತ್ರ 4 ಜನ ಖರೀದಿದಾರರು ಉಳಿಸಿಕೊಂಡಿದ್ದರೆಂದೂ, ಹಾಗಾಗಿ ದಿನಾಂಕ 29.03.1906 ಮತ್ತು ದಿನಾಂಕ 21.12.1923 ಪತ್ರಗಳು ಕಾರ್ಯರೂಪಕ್ಕೆ ಬಂದಿರುವುದಿಲ್ಲವೆಂದೂ, ಹಾಗಾಗಿ ಸ್ವತ್ತಿನ ಸ್ವಾಧೀನವು 4 ಜನ ಖರೀದಿದಾರರಲ್ಲೇ ಉಳಿದುಕೊಂಡು ಬಂದಿರುತ್ತವೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ನಿಪಿ-23 ದಿನಾಂಕ 29.03.1906 ರ ಕ್ರಯಪತ್ರ ನಿಪಿ-9

ಹಾಗೂ ದಿನಾಂಕ 21.12.1923 ರ ಕ್ರಯಪತ್ರಗಳಲ್ಲಿ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರುವ ಬಗ್ಗೆ ಸ್ಪಷ್ಟವಾಗಿ ನಮೂದಾಗಿರುತ್ತದೆ. ಸದರಿ ದಾಖಲಾತಿಗಳನ್ನು ಸಾಲದ ಭದ್ರತೆ ಬಾಬ್ತು ನಾಮಮಾತ್ರ ಕ್ರಯಪತ್ರವೆಂದು ಪುರಾವೆ ಮಾಡಲು ಯಾವುದೇ ಪೂರಕ ದಾಖಲಾತಿಗಳನ್ನಾಗಲೀ, ಹಾಗೆಯೇ ಸದರಿ ಕ್ರಯಪತ್ರಗಳನ್ನು ರದ್ದುಪಡಿಸಿ ಪುನಃ ಅವರ ಹೆಸರಿಗೆ ಕ್ರಯಪತ್ರ ಬರೆಯಿಸಿಕೊಂಡಿರುವ ಬಾಬ್ತು (Re-conveyance deed) ಮರು ಕ್ರಯಪತ್ರ ಎಂಬ ಯಾವುದೇ ದಾಖಲಾತಿಗಳನ್ನಾಗಲೀ ವಾದಿಯರು ಹಾಜರುಪಡಿಸಿರುವುದಿಲ್ಲ. ಸದರಿ ಮೇಲೆ ಹೇಳಿದ ಕ್ರಯಪತ್ರಗಳು ನೋಂದಾಯಿತ ಕ್ರಯಪತ್ರಗಳಾಗಿದ್ದು, ಸಾರ್ವತ್ರಿಕ ದಾಖಲಾತಿಗಳಾಗಿರುತ್ತವೆ. ಹಾಗಾಗಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 78 ರ ಪ್ರಕಾರ ಅವುಗಳ ನೈಜತೆಯ ಬಗ್ಗೆ ಪೂರ್ವಭಾವನೆ ತೆಗೆದುಕೊಳ್ಳಬಹುದಾಗಿರುತ್ತದೆ. ಹಾಗಾಗಿ ವಾದಿಯರು ಹೇಳುವ ಪ್ರಕಾರ ಈ ಮೇಲೆ ಹೇಳಿರುವ ನಿಪಿ-9 ಮತ್ತು ನಿಪಿ-23 ಎರಡೂ ಕ್ರಯಪತ್ರಗಳು ನಾಮ ಮಾತ್ರ ಕ್ರಯಪತ್ರಗಳೆಂದೂ, ಸ್ವಾಧೀನವನ್ನು 4 ಜನ ಖರೀದಿದಾರರು ಉಳಿಸಿಕೊಂಡು ಬಂದಿರುತ್ತಾರೆಂದೂ ಹೇಳುವುದು ನಂಬಲರ್ಹವಾಗಿರುವುದಿಲ್ಲ.

**20.** ಮುಂದುವರೆದು, 4 ಜನ ಖರೀದಿದಾರರು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದಲ್ಲಿ ದಾವಾ ಅನುಸೂಚಿ ಸ್ವತ್ತು ವಾದಿಯರ ತಾತ ಲಿಂಗ ಅಲಿಯಾಸ್ ಮೊಳ್ಳ ರವರ ಭಾಗಕ್ಕೆ ಬಂದಿರುತ್ತದೆಂದು ಹೇಳುತ್ತಾರೆ. ಆದರೆ ಸದರಿ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡು ಅದರಂತೆ ಲಿಂಗ ಅಲಿಯಾಸ್ ಮೊಳ್ಳ ರವರ ಹೆಸರಿಗೆ ಮ್ಯುಟೇಷನ್ ಅಂಗೀಕಾರವಾಗಿ ಆರ್.ಟಿ.ಸಿ. ಅವರ ಹೆಸರಿಗೆ ಬಂದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ವಾದಿಯರು ಹಾಜರುಪಡಿಸಿರುವುದಿಲ್ಲ. ಹಾಗೆಯೇ ಪ್ರಸ್ತುತ ದಾವಾ ಸ್ವತ್ತಿನ ದಾಖಲಾತಿಗಳು ವಾದಿಯರ ಹೆಸರಿಗೆ ಇರುವ ಯಾವುದೇ ಒಂದು ದಾಖಲೆಗಳನ್ನೂ ಹಾಜರುಪಡಿಸಿರುವುದಿಲ್ಲ. ಅದಲ್ಲದೇ ನಿಪಿ-9 ಮತ್ತು ನಿಪಿ-23

ಕ್ರಯಪತ್ರಗಳ ಖರೀದಿದಾರರ ಕುಟುಂಬದ ಯಾವುದೇ ಸದಸ್ಯರನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿ, ದಾವಾ ಅನುಸೂಚಿ ಸ್ವತ್ತಿನ ಬಾಬ್ತು ಆಗಿದ್ದಂತಹ ಕ್ರಯ ಪತ್ರಗಳು ನಾಮ ಮಾತ್ರ ಪತ್ರಗಳು, ಅದರಂತೆ ಸ್ವಾಧೀನ ನೀಡಿರುವುದಿಲ್ಲ, ಬದಲಾಗಿ 4 ಜನ ಖರೀದಿದಾರರ ಬಳಿಯೇ ಉಳಿಸಿಕೊಂಡಿದ್ದು, ಈಗಲೂ ಸದರಿ ಸ್ವತ್ತು ವಾದಿಯರ ಹಕ್ಕು ಮತ್ತು ಸ್ವಾಧೀನದಲ್ಲಿದೆ ಎಂಬುದನ್ನು ಮೌಖಿಕ ಸಾಕ್ಷ್ಯದ ಮೂಲ ಪುರಾವೆ ಮಾಡುವ ಯಾವುದೇ ಪ್ರಯತ್ನ ಮಾಡಿರುವುದಿಲ್ಲ.

**21.** ಮುಂದುವರೆದು, ವಾದಿಯರ ತಾತ ಲಿಂಗ ಅಲಿಯಾಸ್ ಮೊಳ್ಳ ಮತ್ತು ಇತರೆ 3 ಜನ ಸೇರಿ ನಿಪಿ-3 ರಂತೆ ಸ್ವತ್ತನ್ನೂ ಖರೀದಿ ಮಾಡಿದ ವೇಳೆ ಸರ್ವೆ ನಂ. 6 ಎಂದು ಇದ್ದು, ಸದರಿ ಸರ್ವೆ ನಂಬರ್ 6, 1911ನೇ ಇಸವಿಯಲ್ಲಿ ರೀ ಸರ್ವೆಯಾಗಿ ಸರ್ವೆ ನಂ. 7 ಎಂದು ಆಗಿರುತ್ತದೆಂದು ವಾದಿಯರು ಹೇಳುತ್ತಾರೆ. ಆದರೆ 1911ನೇ ಇಸವಿಯಲ್ಲಿ ಸರ್ವೆ ನಂ.6ರ ದುರಸ್ತಿಯ ಪ್ರಕ್ರಿಯೇ ನಡೆದ ಕುರಿತಾಗಿ ಯಾವುದೇ ಪೂರಕ ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ವಾದಿಯರು ಹಾಜರುಪಡಿಸಿರುವುದಿಲ್ಲ. ಕೇವಲ ರೀ-ಸರ್ವೆ ಟಿಪ್ಪಣಿ ನಕಲು ಎಂದು ಹಾಜರುಪಡಿಸಿರುವ ನಿಪಿ-1 ರ ಆಧಾರದ ಮೇರೆಗೆ ಸರ್ವೆ ನಂ. 6 ಇದು ರೀ-ಸರ್ವೆಯಾಗಿ ಸರ್ವೆ ನಂ.7 ಆಗಿರುತ್ತದೆಂದು ಪೂರಕ ದಾಖಲಾತಿಗಳ ಅನುಪಸ್ಥಿತಿಯಲ್ಲಿ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ.

**22.** 12ನೇ ಪ್ರತಿವಾದಿಯರ ಪ್ರಕಾರ ಸರ್ವೆ ನಂ. 6 ಬೇರೆ ಸ್ವತ್ತು ಮತ್ತು ಸರ್ವೆ ನಂ. 7 ಬೇರೆ ಸ್ವತ್ತಾಗಿರುತ್ತದೆಂದು ಲಿಖಿತ ಹೇಳಿಕೆಯಲ್ಲಿ ನಿಲುವು ತೆಗೆದುಕೊಂಡಿರುತ್ತಾರೆ. ಈ ಕುರಿತಾಗಿ 12ನೇ ಪ್ರತಿವಾದಿ ಪರ ವಕೀಲರು ಪಿಡಬ್ಲ್ಯೂ-1 ರವರು ಪಾಟೀ ಸವಾಲಿನ ವೇಳೆ ಪ್ರಶ್ನಿಸಿದ್ದು, ಪಿಡಬ್ಲ್ಯೂ-1 ರವರು ಈ ಕೆಳಗಿನ ರೀತಿ ಉತ್ತರಿಸಿರುತ್ತಾರೆ.

" ಸರ್ವೆ ನಂ. 6 ನ್ನು ನಾವು ಖರೀದಿ ಮಾಡಿಕೊಂಡ ದಿನ ಹಳೇಹಳ್ಳಿ ಗ್ರಾಮದಲ್ಲಿ ಸರ್ವೆ ನಂ.7 ಸಹ ಅಸ್ಥಿತ್ವದಲ್ಲಿತ್ತು ಎಂದರೆ ಸರಿ. ಸರ್ವೆ ನಂ. 6ರ ಮಾಲೀಕರು ಕಾವೇರಮ್ಮ ಮತ್ತು ಸುಬ್ಬರಾಯಿ ಆಗಿದ್ದರು ಎಂದರೆ ಸರಿ. ಸರ್ವೆ ನಂ. 7 ಕಾವೇರಮ್ಮ ಮತ್ತು ಸುಬ್ಬರಾಯಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ. ಸರ್ವೆ ನಂ. 6ಕ್ಕೆ ಮತ್ತು ಸರ್ವೆ ನಂ. 7 ಕ್ಕೆ ಬೇರೆ ಬೇರೆ ಚೆಕ್ ಬಂದಿ ಹಾಗೂ ಅವುಗಳನ್ನು ಬೇರೆ ಬೇರೆ ಆಸ್ತಿಗಳು ಎಂದರೆ ಸರಿ. 1905 ರಲ್ಲಿ ಸರ್ವೆ ನಂ. 6 ಒಟ್ಟು ವಿಸ್ತೀರ್ಣ 20 ಎಕರೆ 0.24 ಗುಂಟೆ ಮಾತ್ರ ಇತ್ತು ಎಂದರೆ ಸರಿ. ಸರ್ವೆ ನಂ. 7 ರಲ್ಲಿ 26 ಎಕರೆ 0.01 ಗುಂಟೆ ಅದರಲ್ಲಿ 0.12 ಗುಂಟೆ 'ಎ' ಖರಾಬು, 1 ಎಕರೆ 0.33 ಗುಂಟೆ 'ಬಿ' ಖರಾಬು ಎಂದರೆ ಸರಿ." ಸರ್ವೆ ನಂ. 7 ರ ಪಹಣಿ, ಖಾತೆಯು ಪಿಟ್ಟೀಗೌಡ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಆರ್.ಆರ್. ಅವರ ಮಕ್ಕಳ ಹೆಸರಿನಲ್ಲಿ 1937 ರ ನಂತರ ಅವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ."

ಮುಂದುವರೆದು, "ಚಿಕ್ಕನಂಜುಂಡ ರವರಿಗೆ ನಂಜಪ್ಪ ಎಂಬ ಮಗ ಇದ್ದು, 05.07.1965 ರಲ್ಲಿ ಕೆಂಪೇಗೌಡ ಅವರಿಗೆ 2 ಎಕರೆ 0.20 ಗುಂಟೆ ಸರ್ವೆ ನಂ. 7 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ". "ದೊಡ್ಡ ನಂಜುಂಡ ರವರಿಗೆ ಸಣ್ಣಮ್ಮ ಎಂಬ ಮಗಳು ಇದ್ದು, ಸದರಿ ಸಣ್ಣಮ್ಮ ಮತ್ತು ಆಕೆಯ ಗಂಡ ದಿನಾಂಕ 20.05.1967 ರಲ್ಲಿ ಚಿಕ್ಕು ಬಿನ್ ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ."

ಸರ್ವೆ ನಂ. 7 ರ ಚೆಕ್‌ಬಂದಿ ಪೂರ್ವಕ್ಕೆ ಶಿಂಷಾ ನದಿ ಎಂದರೆ ಸರಿ. ಪಶ್ಚಿಮಕ್ಕೆ ಸರ್ವೆ ನಂ. 6 ಎಂದರೆ ಸರಿ. ಸರ್ವೆ ನಂ. 6 ಕರೀಗೌಡರದು ಎಂದರೆ ಇರಬೇಕು, ಉತ್ತರಕ್ಕೆ ಕಿರಂಗೂರು ಎಲ್ಲೆ ಎಂದರೆ ಸರಿ. ದಕ್ಷಿಣಕ್ಕೆ ಶಿಂಷಾ ನದಿ ಮತ್ತು ಸರ್ವೆ ನಂ. 8 ಇದೆ ಎಂದರೆ ಹಳ್ಳ ಮತ್ತು ಕೊರಕಲು ಇದೆ" ಎಂದು ಉತ್ತರಿಸಿರುತ್ತಾರೆ.

**23.** ಪಿಡಬ್ಲ್ಯೂ-2 ರವರನ್ನು ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ಈ ಕೆಳಗಿನ ರೀತಿ ಉತ್ತರಿಸಿರುತ್ತಾರೆ.

"ಹಳೇಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 6 ಮತ್ತು ಸರ್ವೆ ನಂ. 7 ಇದೆ ಎಂದರೆ ಸರಿ. ಸರ್ವೆ ನಂ. 6 ರ ವಿಸ್ತೀರ್ಣ 20 ಎಕರೆ 0.24 ಗುಂಟೆ ಎಂದರೆ ಸರಿ. ಸರ್ವೆ ನಂ.7 ರ ಚೆಕ್ ಬಂದಿ ಪೂರ್ವಕ್ಕೆ ಶಿಂಷಾ ನದಿ ಎಂದರೆ ಸರಿ. ಸರ್ವೆ ನಂ.7 ರ ಉತ್ತರಕ್ಕೆ ಕಿರಂಗೂರ್ ಎಲ್ಲೆ ಎಂದರೆ ಸರಿ."

**"**ಸರ್ವೆ ನಂ**. 6** ರ ಪೂರ್ವಕ್ಕೆ ಸರ್ವೆ ನಂ**. 7** ಜಮೀನು ಇದೆ ಎಂದರೆ ಸರಿ**".**

**"**ಸರ್ವೆ ನಂ**. 6** ಮತ್ತು **7**ಕ್ಕೆ ಪ್ರತ್ಯೇಕವಾದ ಚೆಕ್ ಬಂದಿ ಇದೆ ಎಂದರೆ ಸರಿ**.** ಎರಡೂ ಸರ್ವೆ ನಂಬರ್ ಗಳ ವಿಸ್ತೀರ್ಣಗಳು ಬೇರೆ ಬೇರೆ ಎಂದರೆ ಸರಿ**.**

**24.** ಪಿಡಬ್ಲ್ಯೂ-5 ರವರನ್ನು ಪ್ರತಿವಾದಿ 12 ರವರ ಪರ ವಕೀಲರ ಪಾಟೀ ಸವಾಲಿಗೆ ಒಳಪಡಿಸಿದ ವೇಳೆ ಈ ಕೆಳಗಿನ ರೀತಿ ಉತ್ತರಿಸಿರುತ್ತಾರೆ.

**"**ಗ್ರಾಮ ನಕ್ಷೆಯ ದೃಢೀಕೃತ ನಕಲನ್ನು ತೋರಿಸಿ**,** ಅದನ್ನು ಅವರು ಒಪ್ಪಿದ ಮೇರೆಗೆ ನಿಡಿ**-1** ಎಂದು ನಿಶಾನೆಯಾಗಿ ಗುರ್ತಿಸಲಾಗಿರುತ್ತದೆ**.** ಮುಂದುವರೆದು ನಿಡಿ**-1** ರಲ್ಲಿ ಸರ್ವೆ ನಂ**. 5, 6, 7** ನ್ನು ನೋಡಿ ಪಿಡಬ್ಲ್ಯೂ**-5** ರವರು ಗುರ್ತಿಸಿದ ಮೇರೆಗೆ ನಿಡಿ**-1** **'**ಎ**',** ನಿಡಿ**-1** **'**ಬಿ**'** ಮತ್ತು ನಿಡಿ**-1** **'**ಸಿ**'** ಎಂದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ**.** ಮುಂದುವರೆದು**,** ಸದರಿ ಗ್ರಾಮ ನಕ್ಷೆಯಲ್ಲಿ ಸರ್ವೆ ನಂ**. 5, 6** ಮತ್ತು **7** ರ ಚೆಕ್ ಬಂದಿ ಬೇರೆ**-**ಬೇರೆಯಾಗಿರುತ್ತದೆ ಎಂದರೆ ಸರಿ**.** ನಿಡಿ**-1** ನ್ನು **1916** ರಲ್ಲಿ ಸರ್ಕಾರದಿಂದ ತಯಾರು ಮಾಡಿರುತ್ತಾರೆ ಎಂದರೆ ಸರಿ**.** ನಿಡಿ**-1** ನಕ್ಷೆ ಈಗಲೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ**.** ನಿಡಿ**-1** ರ ಪ್ರಕಾರ ಹಳೇಹಳ್ಳಿ ಗ್ರಾಮದಲ್ಲಿ ಇವತ್ತಿಗೂ ಕೂಡ ಸರ್ವೆ ನಂ**. 6** ಮತ್ತು **7** ಜಮೀನುಗಳು ಇವೆ ಎಂದರೆ ಸರಿ**." "**ಸರ್ವೆ ನಂ**. 6** ರ ಪೂರ್ವಕ್ಕೆ ಸರ್ವೆ ನಂ**. 7** ಇದೆ ಎಂದರೆ ಸರಿ**". "**ಸರ್ವೆ ನಂ**. 7**ರ ಪೂರ್ವಕ್ಕೆ ಶಿಂಷಾ ನದಿ ಇದೆ ಎಂದರೆ ಸರಿ**". "**ಸರ್ವೆ ನಂ**. 7** ರ ಪಶ್ಚಿಮಕ್ಕೆ ಸರ್ವೆ ನಂ**.6** ಇದೆ ಎಂದರೆ ಸರಿ**."**

**"**ಸರ್ವೆ ನಂ**. 6** ನ್ನು ಸರ್ವೆ ನಂ**.7** ಆಗಿ ಬದಲಾವಣೆ ಮಾಡಿದ್ದಕ್ಕೆ ಏನು ನಡವಳಿಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ**.** ದಾವೆಯನ್ನು ಹೂಡುವ ಮುಂಚೆ ಸರ್ವೆ ನಂ**.6** ನ್ನು ಸರ್ವೆ ನಂ**. 7** ಆಗಿ ಬದಲಾವಣೆ ಮಾಡಿದ್ದಕ್ಕೆ ನಡವಳಿಕೆಯ ಬಗ್ಗೆ ದಾಖಲೆಯನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿರುತ್ತೀರಾ ಎಂದರೆ ಮಾಡಿರುವುದಿಲ್ಲ**."**

" ಇವತ್ತಿಗೂ ಕೂಡ ಹಳೇ ಹಳ್ಳಿ ಗ್ರಾಮದಲ್ಲಿ ಸರ್ವೆ ನಂ. **6** ಮತ್ತು **7** ನಿಡಿ-**1** ರಂತೆ ಇದೆ ಎಂದರೆ ಸರಿ."

**25.** ಪ್ರತಿವಾದಿ ಪರ ವಕೀಲರು ಪಿಡಬ್ಲ್ಯೂ-6 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಆ ವೇಳೆ ಈ ರೀತಿ ಹೇಳುತ್ತಾರೆ.

"**6**ನೇ ಸರ್ವೆ ನಂ. **6** ಮತ್ತು **7**ನ್ನು ನೋಡಿರುತ್ತೇನೆ. ಸರ್ವೆ ನಂ.**6** ರಲ್ಲಿ **20** ಎಕರೆ **0.24** ಗುಂಟೆ, ಸರ್ವೆ ನಂ. **7** ರಲ್ಲಿ **26** ಎಕರೆ **0.01** ಗುಂಟೆ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಜನರು ಆ ರೀತಿ ಹೇಳುತ್ತಾರೆಂದು ಉತ್ತರಿಸಿರುತ್ತಾರೆ."

**26.** ಪಿಡಬ್ಲ್ಯೂ-1 ರಿಂದ ಪಿಡಬ್ಲ್ಯೂ-6 ರವರು ಈ ಮೇಲಿನ ರೀತಿ ಪಾಟೀ ಸವಾಲಿನಲ್ಲಿ ಉತ್ತರಿಸಿರುವುದನ್ನು ಗಮನಿಸಿದಾಗ ಸರ್ವೆ ನಂ. 6 ಇದು ಸರ್ವೆ ನಂ. 7 ಎಂದು ಯಾವ ನಡವಳಿಗಳು ನಡೆದು ಆ ರೀತಿ ಬದಲಾವಣೆ ಆಗಿರುತ್ತದೆ ಎಂಬುದರ ಬಗ್ಗೆ ಯಾವುದೇ ದಾಖಲಾತಿಗಳನ್ನು ವಾದಿಯರು ಹಾಜರುಪಡಿಸದಿರುವುದು ಕಂಡುಬರುತ್ತದೆ. ಹಾಗೆಯೇ ಸರ್ವೆ ನಂ. 6 ಮತ್ತು ಸರ್ವೆ ನಂ. 7 ಈ ಎರಡೂ ಸ್ವತ್ತುಗಳು ಹಳೇಹಳ್ಳಿ ಗ್ರಾಮದಲ್ಲಿ ಈಗಲೂ ಅಸ್ಥಿತ್ವದಲ್ಲಿದ್ದು, ಸರ್ವೆ ನಂಬರ್ 6 ಮತ್ತು 7ಕ್ಕೆ ಬೇರೆ ಬೇರೆ ಚೆಕ್ ಬಂದಿಗಳಿರುತ್ತವೆ ಎಂಬುದಾಗಿ ತಿಳಿದುಬರುತ್ತದೆ. ಹಾಗೆಯೇ ಸರ್ವೆ ನಂಬರ್ 6 ರ ಪೂರ್ವಕ್ಕೆ ಸರ್ವೆ ನಂ. 7 ಇದ್ದು, ಸದರಿ ಸರ್ವೆ ನಂ. 7 ರ ಪೂರ್ವಕ್ಕೆ ಶಿಂಷಾ ನದಿ ಹಾಗೂ ಪಶ್ಚಿಮಕ್ಕೆ ಸರ್ವೆ ನಂ.7 ಇರುವುದಾಗಿ ತಿಳಿದುಬರುತ್ತದೆ. ಹಾಗೆಯೇ ನಿಡಿ-1 ಗ್ರಾಮ ನಕ್ಷೆಯನ್ನು ಪರಿಶೀಲಿಸಿದಾಗ, ಸರ್ವೆ ನಂ. 6 ಮತ್ತು ಸರ್ವೆ ನಂ. 7 ಎರಡೂ ಅಸ್ತಿತ್ವದಲ್ಲಿರುವುದು ಮತ್ತು ಸರ್ವೆ ನಂ. 6 ರ ಪೂರ್ವಕ್ಕೆ ಸರ್ವೆ ನಂ.7 ಇರುವುದು ಮತ್ತು ಸರ್ವೆ ನಂ. 7 ರ ಪೂರ್ವಕ್ಕೆ ಶಿಂಷಾ ನದಿ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮೇಲಾಗಿ ಸದರಿ ಸಂಗತಿಗಳನ್ನು ಪಿಡಬ್ಲ್ಯೂ-1 ರಿಂದ 6 ರವರು ಪಾಟೀ ಸವಾಲಿನ ವೇಳೆ ಈ ಮೇಲಿನ ರೀತಿ ಒಪ್ಪಿ ಉತ್ತರಿಸಿರುವುದು ನಿಡಿ-1 ರ ಸಂಗತಿಗಳನ್ನು ಪುಷ್ಠೀಕರಿಸುತ್ತವೆ.

ಹಾಗಾಗಿ ವಾದಿಯರು ಸರ್ವೆ ನಂ. 6, ರೀ ಸರ್ವೆಯಾಗಿ ಸರ್ವೆ ನಂ. 7 ಆಗಿರುತ್ತದೆ ಎಂಬುದನ್ನೂ, ಸದರಿ ಸ್ವತ್ತಿಗೆ ತಾವೇ ಕಾನೂನುಬದ್ಧ ಮಾಲೀಕರು ಎಂಬುದಾಗಿ ಹೇಳಿರುವುದನ್ನು ಯಾವುದೇ ಮೂಲ ನೋಂದಾಯಿತ ದಾಖಲಾತಿಗಳ ಮೂಲಕವಾಗಲೀ, ಅದಕ್ಕೆ ಪೂರಕವಾದ ರೆವಿನ್ಯೂ ದಾಖಲಾತಿಗಳ ಮೂಲಕವಾಗಲೀ ಸಾಭೀತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಈ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳಿಗಾಗಿ ಅಸಲು ದಾವಾ ಸಂಖ್ಯೆ: 37/2015 ರಿಂದ ಅಸಲು ದಾವಾ ಸಂಖ್ಯೆ: 40/2015 ರ ವಿವಾದಾಂಶ**-1**ನ್ನು ಮತ್ತು ಅಧಿಕ ವಿವಾದಾಂಶ**-1**ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ**.**

**27.** ಅಸಲು ದಾವಾ ಸಂಖ್ಯೆ: **37/2015** ರಿಂದ ಅಸಲು ದಾವಾ ಸಂಖ್ಯೆ: **40/2015** ರ ವಿವಾದಾಂಶ**-2:-**

ಈ ನಾಲ್ಕೂ ದಾವೆಗಳ ವಾದಿಯರು ದಾವಾ ಅನುಸೂಚಿ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುವುದಾಗಿ ಹೇಳಿರುತ್ತಾರೆ. ಆದರೆ ಈಗಾಗಲೇ ವಿವಾದಾಂಶ-1 ರಲ್ಲಿ ವಿವರಿಸಿರುವ ಪ್ರಕಾರ ವಾದಿಯರು ದಾವಾ ಅನುಸೂಚಿ ಸ್ವತ್ತಿನ ಮಾಲೀಕರು ಎಂಬುದನ್ನು ನಂಬಲರ್ಹ ಮೂಲ ದಾಖಲಾತಿ ಸಾಕ್ಷ್ಯಾಧಾರಗಳಿಂದ ಪುರಾವೆ ಮಾಡಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಅಲ್ಲದೇ ನಿಪಿ-9 ಮತ್ತು ನಿಪಿ-23 ರ ಕ್ರಯಪತ್ರಗಳಲ್ಲಿ ನಮೂದಿರುವ ಪ್ರಕಾರ ಸರ್ವೆ ನಂ.6 ರ ಖರೀದಿದಾರರಾದ ಲಿಂಗ ಅಲಿಯಾಸ್ ಮೊಳ್ಳ, ನಿಂಗ, ಅಣ್ಣಯ್ಯ ಮತ್ತು ನಂಜೇಗೌಡ ರವರು ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಕೋನಿಗೌಡ ಬಿನ್ ನಿಂಗೇಗೌಡ ರವರಿಗೆ ಮಾರಾಟ ಮಾಡಿ, ಅದೇ ದಿನ ಸ್ವಾಧೀನವನ್ನು ಅವರ ಸುಫರ್ದಿಗೆ ಬಿಟ್ಟುಕೊಟ್ಟಿರುತ್ತಾರೆ. ಸದರಿ ಕ್ರಯಪತ್ರಗಳು ನಾಮ ಮಾತ್ರ ಪತ್ರಗಳು ಮತ್ತು ಸ್ವಾಧೀನ ಖರೀದಿದಾರರಿಗೆ ಹಸ್ತಾಂತರವಾಗಿಲ್ಲ, ಬದಲಾಗಿ 4 ಜನ ಖರೀದಿದಾರರ ಬಳಿಯೇ ಉಳಿದಿದೆ ಎಂಬುದನ್ನು ವಾದಿಯರು ಸೂಕ್ತ ಮತ್ತು ನಂಬಲರ್ಹ ಸಾಕ್ಷ್ಯಾಧಾರಗಳಿಂದ ಸಾಭೀತುಪಡಿಸಿರುವುದಿಲ್ಲ.

ಮೇಲಾಗಿ ವಾದಿ ಪರ ಸಾಕ್ಷಿದಾರರಾದ ಪಿಡಬ್ಲ್ಯೂ-6 ರವರು ಪಾಟೀ ಸವಾಲಿನ ವೇಳೆ ಈ ಕೆಳಗಿನ ರೀತಿ ಹೇಳಿರುತ್ತಾರೆ.

"ಸರ್ವೆ ನಂ.7 ರಲ್ಲಿ 12ನೇ ಪ್ರತಿವಾದಿ ಅಲ್ಲದೇ ಅಂಕೇಗೌಡರ ಮಗ ಕೆಂಪೇಗೌಡ ರವರು ಒಂದು ಭಾಗದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರೂ ಕೂಡ ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಸರ್ವೆ ನಂ. 7 ರಲ್ಲಿ 12ನೇ ಪ್ರತಿವಾದಿ ಅಲ್ಲದೇ ಅಂಕೇಗೌಡರ ಮಗ ಇನ್ನೊಬ್ಬ ಚಿಕ್ಕೋನು ರವರು ಒಂದು ಭಾಗದಲ್ಲಿ ಇದ್ದಾರೆ ಎಂದು ಉತ್ತರಿಸಿರುತ್ತಾರೆ. ಈ ಕೇಸಿನ ವಾದಿಗಳು ಸರ್ವೆ ನಂಬರ್ 7 ರಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮದು ಎಂದು ಸ್ವಾಧೀನದಲ್ಲಿ ಇರುವುದಿಲ್ಲ. ಆದರೆ ದನಕರು ಮೇಯಿಸುತ್ತಾರೆಂದು ನುಡಿದಿರುತ್ತಾರೆ".

ಡಿಡಬ್ಲ್ಯೂ-6 ರವರು ಈ ಮೇಲಿನ ರೀತಿ ಉತ್ತರಿಸುವ ಮೂಲಕ ವಾದಿಯರು ದಾವಾ ಅನುಸೂಚಿ ಸ್ವತ್ತು ಸರ್ವೆ ನಂ. 7 ರಲ್ಲಿ ಸ್ವಾಧೀನದಲ್ಲಿ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಹೀಗಿರುವಲ್ಲಿ ಪ್ರತಿವಾದಿಯರು ವಾದಿಯರ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿರುತ್ತಾರೆಂದು ಹೇಳುವುದನ್ನು ಒಪ್ಪಲು ಅಸಾಧ್ಯವಿಲ್ಲ. ಆದ್ದರಿಂದ ಈ ಮೇಲೆ ವಿವರಿಸಿರುವ ಕಾರಣಗಳಿಗಾಗಿ ವಿವಾದಾಂಶ **37/2015** ರಿಂದ ವಿವಾದಾಂಶ **40/2015** ರ ವಿವಾದಾಂಶ-**2**ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**28.** <u>ಅಸಲು ದಾವಾ ಸಂಖ್ಯೆ: **40/2015** ರ ವಿವಾದಾಂಶ-**4:-**</u> 12ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯ ಖಂಡಿಕೆ 22 ರಲ್ಲಿ ನಂಜಪ್ಪ ಅಲಿಯಾಸ್ ಸುಬ್ಬಣ್ಣ ಬಿನ್ ಚಿಕ್ಕ ನಂಜುಂಡೇಗೌಡ ರವರು ದಿನಾಂಕ 05.07.1965 ರಲ್ಲಿ ಕೆಂಪೇಗೌಡ ಬಿನ್ ಲಿಂಗೇಗೌಡ ರವರಿಗೆ ಸರ್ವೆ ನಂ. 7 ರಲ್ಲಿ 2 ಎಕರೆ 0.20 ಗುಂಟೆ ಜಮೀನನ್ನು ಶುದ್ಧ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದೂ, ಹಾಗೆಯೇ

ಸಣ್ಣಮ್ಮನ ದತ್ತು ಮಗ ಬೋರೇಗೌಡ ಅಲಿಯಾಸ್ ಬೋರಯ್ಯ ದಿನಾಂಕ 20.05.1967 ರಲ್ಲಿ 2 ಎಕರೆ 0.07 ಗುಂಟೆ ಸ್ವತ್ತನ್ನು ಚಿಕ್ಕೋನು ಬಿನ್ ಅಂಕೇಗೌಡ ರವರಿಗೆ ಮಾರಾಟ ಮಾಡಿರುತ್ತಾರೆ. ಆದರೆ ವಾದಿ ಸದರಿ ಖರೀದಿದಾರರನ್ನು ತಮ್ಮ ವಾದ ಪತ್ರದಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಹಾಗಾಗಿ ವಾದಿಯ ದಾವೆ ಅವಶ್ಯಕ ಪಕ್ಷಗಾರರನ್ನು ಮಾಡದೇ ಇರುವ ಕಾರಣ ಕಾನೂನು ರೀತಿ ಬಾಧಿತವಾಗಿದೆ ಎಂದು ನಿಲುವು ತೆಗೆದುಕೊಂಡಿರುತ್ತಾರೆ.

**29.** ಡಿಡಬ್ಲ್ಯೂ-1 ರವರು ಸದರಿ ಸಂಗತಿಗೆ ಪೂರಕವಾಗಿ ನಿಪಿ-6, ನಿಪಿ-6 (ಎ) ಹಾಗೂ ನಿಪಿ-7, ನಿಪಿ7(ಎ) ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ, ಈ ಮೇಲೆ ಹೆಳಿದ ಪ್ರಕಾರ ಹಳೇಹಳ್ಳಿ ಗ್ರಾಮ ಸರ್ವೆ ನಂ. 7 ರಲ್ಲಿ ಕೆಂಪೇಗೌಡ ಮತ್ತು ಚಿಕ್ಕೋನು ರವರಿಗೆ ಕ್ರಯದ ವ್ಯವಹಾರಗಳು ನಡೆದಿರುವುದು ಕಂಡುಬರುತ್ತದೆ. ಆದರೆ ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿರುವುದಿಲ್ಲ. ವಾದಿ ದಾವಾ ಅನುಸೂಚಿ ಸ್ವತ್ತು ಸರ್ವೆ ನಂ. 7 ಎಂಬುದಾಗಿಯೂ ವಾದ ಪತ್ರದಲ್ಲಿ ನಮೂದಿಸಿರುವುದರಿಂದ ಸದರಿ ಸರ್ವೆ ನಂ. 7 ಕ್ಕೆ ಸಂಬಂಧಿಸಿದಂತೆ ನಡೆದಿರುವ ಕ್ರಯದ ವ್ಯವಹಾರಗಳ ಎಲ್ಲಾ ಸಂಬಂಧಪಟ್ಟ ಖರೀದಿದಾರರನ್ನು ಅವಶ್ಯಕವಾಗಿ ಪಕ್ಷಗಾರರಾಗಿ ದಾವೆಯಲ್ಲಿ ಸೇರಿಸತಕ್ಕದ್ದಾಗಿರುತ್ತದೆ. ಆದರೆ ವಾದ ಪತ್ರದಲ್ಲಿ ಸದರಿ ಕೆಂಪೇಗೌಡ ಮತ್ತು ಚಿಕ್ಕೋನು ರವರನ್ನು ವಾದಿ ಪ್ರತಿವಾದಿಗಳಾಗಿ ಸೇರಿಸಿರುವುದಿಲ್ಲ. ಆದ್ದರಿಂದ ವಿವಾದಾಂಶ**-4** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ**.**

**30.** <u>ಅಸಲು ದಾವಾ ಸಂಖ್ಯೆ: **40/2015** ರ ವಿವಾದಾಂಶ**-5:-**</u> ಡಿಡಬ್ಲ್ಯೂ-1 ರವರು ತಮ್ಮ ಲಿಖಿತ ಹೇಳಿಕೆ ಹಾಗೂ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತೀರ್ಪಿನ ಪ್ಯಾರಾ-4 ರಲ್ಲಿ ಮುಂದುವರೆದು, ದಿನಾಂಕ 04.09.2014 ರಂದು 13 ರಿಂದ 21ನೇ

ಪ್ರತಿವಾದಿಯರು ಸರ್ವೆ ನಂ. 7 ರಲ್ಲಿ 1 ಎಕರೆ 0.33 ಗುಂಟೆ ಖರಾಬು ಸೇರಿ ಒಟ್ಟು 21 ಎಕರೆ 0.02 ಗುಂಟೆ ಜಮೀನನ್ನು 12ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ 12ನೇ ಪ್ರತಿವಾದಿ ಸರ್ವೆ ನಂ. 7 ರ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆಂದು ನಿಲುವು ತೆಗೆದುಕೊಂಡಿರುತ್ತಾರೆ. ಸದರಿ ಸಂಗತಿಗಳನ್ನು ಪುರಾವೆ ಮಾಡಲು ಡಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯ ವಿಚಾರಣೆ ವೇಳೆ ರೆವಿನ್ಯೂ ದಾಖಲಾತಿಗಳಾದ ನಿಡಿ-10 ತಹಶೀಲ್ದಾರ್ ಆದೇಶ, ನಿಡಿ-12 ಉಪ ವಿಭಾಗಾಧಿಕಾರಿಗಳವರ ಆದೇಶ, ನಿಡಿ-14 ಮತ್ತು ನಿಡಿ-15 ಜಿಲ್ಲಾಧಿಕಾರಿಯವರ ನ್ಯಾಯಾಲಯದ ಆದೇಶ, ನಿಡಿ-53 ಫಸಲು ಪಹಣಿ ತಃಖ್ತೆ, ನಿಡಿ-55, ನಿಡಿ-59 ರಿಂದ ನಿಡಿ-61 ಕಂದಾಯ ಪಾವತಿ ರಶೀದಿಗಳು ಹಾಗೂ ನಿಡಿ-8 ದಿನಾಂಕ 04.09.2014 ರ ಕ್ರಯಪತ್ರ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಆದರೆ ಈಗಾಗಲೇ ವಿವಾದಾಂಶ-1 ಮತ್ತು ಅಧಿಕ ವಿವಾದಾಂಶ-1 ರಲ್ಲಿ ವಿಶ್ಲೇಷಿಸಿರುವ ಪ್ರಕಾರ ವಾದಿಯರು ದಾವಾ ಅನುಸೂಚಿ ಸ್ವತ್ತು ಮೂಲತಃ ಸರ್ವೆ ನಂ. 6 ಆಗಿದ್ದು, 1911 ರಲ್ಲಿ ರೀ-ಸರ್ವೆ ಆದ ಬಳಿಕ ಸರ್ವೆ ನಂ. 7 ಆಗಿರುತ್ತದೆಂದೂ, ಸದರಿ ಸ್ವತ್ತು ತಮ್ಮ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿರುತ್ತದೆಂದು ಪುರಾವೆ ಮಾಡಲು ವಿಫಲರಾಗಿರುತ್ತಾರೆ. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರ ಪ್ರಕಾರ ದಾವಾ ಸಂಗತಿಗಳನ್ನು ಸೂಕ್ತ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳಿಂದ ಪುರಾವೆ ಮಾಡುವ ಪ್ರಾಥಮಿಕ ಹೊಣೆಗಾರಿಕೆ ವಾದಿಯರ ಮೇಲಿದ್ದು, ಅವರು ಪುರಾವೆ ಮಾಡಿದ ಬಳಿಕ ಪ್ರತಿವಾದಿಯರು ಖಂಡನಾ ಸಾಕ್ಷ್ಯದ ಮೂಲಕ ತಮ್ಮ ಲಿಖಿತ ಹೇಳಿಕೆಯಲ್ಲಿ ತೆಗೆದುಕೊಂಡಿರುವ ನಿಲುವುಗಳನ್ನು ಸೂಕ್ತ ಸಾಕ್ಷ್ಯಾಧಾರಗಳಿಂದ ಪುರಾವೆ ಮಾಡತಕ್ಕದ್ದಾಗಿರುತ್ತದೆ. ಆದರೆ ಪ್ರಸ್ತುತ ದಾವೆಗಳಲ್ಲಿ ವಾದಿಯರು ತಮ್ಮ ದಾವಾ ಪತ್ರದ ಸಂಗತಿಗಳನ್ನು ಪುರಾವೆ ಮಾಡಲು ವಿಫಲರಾಗಿರುವುದರಿಂದ ಪ್ರತಿವಾದಿ 12 ರವರು ತಮ್ಮ ಲಿಖಿತ ಹೇಳಿಕೆಯ ಸಂಗತಿಗಳನ್ನು ಪುರಾವೆ ಮಾಡುವ ಅವಶ್ಯಕತೆ ಇರುವುದಿಲ್ಲ.

ಮೇಲಾಗಿ ಪ್ರಸ್ತುತ ದಾವೆಯಲ್ಲಿ 12ನೇ ಪ್ರತಿವಾದಿ ಸರ್ವೆ ನಂ. 7 ಬಾಬ್ತು ಮಾಲೀಕತ್ವದ ಹಕ್ಕು ಘೋಷಣೆ ಡಿಕ್ರಿ ಪರಿಹಾರ ಕೋರಿ ಯಾವುದೇ ಕೌಂಟರ್ ಕ್ಲೇಮು ಮಾಡಿರುವುದಿಲ್ಲ. ಹಾಗೆಯೇ ಅದಕ್ಕೆ ಪೂರಕವಾಗಿ ನ್ಯಾಯಾಲಯದ ಶುಲ್ಕವನ್ನೂ ಪಾವತಿಸಿರುವುದಿಲ್ಲ. ಆದ್ದರಿಂದ ಪ್ರಸ್ತುತ ದಾವೆಯಲ್ಲಿ ಈ ವಿವಾದಾಂಶದ ಕುರಿತಾಗಿ ವಿಶ್ಲೇಷಣೆ ನೀಡುವ ಅವಶ್ಯಕತೆ ಇರುವುದಿಲ್ಲ. ಆದಕಾರಣ ಈ ವಿವಾದಾಂಶವನ್ನು ವಿಶ್ಲೇಷಣೆಗೆ ಉದ್ಭವಿಸುವುದಿಲ್ಲವೆಂದು ಉತ್ತರಿಸಲಾಗಿದೆ.

**31.** <u>ಅಸಲು ದಾವಾ ಸಂಖ್ಯೆ: **37/2015** ರಿಂದ ಅಸಲು ದಾವಾ ಸಂಖ್ಯೆ: **40/2015** ರ ವಿವಾದಾಂಶ**-3** ಮತ್ತು ಅಸಲು ದಾವಾ ಸಂಖೆ **40/2015**ರ ವಿವಾದಾಂಶ**-6:-**</u> ಈ ಮೇಲಿನ ವಿವಾದಾಂಶಗಳಲ್ಲಿ ವಿವರಿಸಿರುವ ಪ್ರಕಾರ 4 ದಾವೆಗಳ ವಾದಿಯರು ತಾವೇ ದಾವಾ ಅನುಸಾಚಿ ಸ್ವತ್ತಿನ ಮಾಲೀಕರು ಮತ್ತು ಸ್ವಾಧೀನಾನುಭವದಾರರು ಎಂಬುದನ್ನು ಪುರಾವೆ ಮಾಡಲು ವಿಫಲರಾಗಿರುತ್ತಾರೆ. ಹೀಗಿರುವಲ್ಲಿ ಪ್ರತಿವಾದಿಯರು ದಾವಾ ಅನುಸೂಚಿ ಸ್ವತ್ತಿನ ವಾದಿಯರ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿರುತ್ತಾರೆಂದು ಹೇಳುವುದನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಆದ್ದರಿಂದ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಈ 4 ದಾವೆಯ ವಾದಿಯರು ಅರ್ಹರಾಗಿರುವುದಿಲ್ಲ. ಆದಕಾರಣ ಅಸಲು ದಾವಾ ಸಂಖ್ಯೆ: **37/2015** ರಿಂದ ಅಸಲು ದಾವಾ ಸಂಖ್ಯೆ: **40/2015**ರ ವಿವಾದಾಂಶ**-3** ನ್ನು ಹಾಗೂ ಅಸಲು ದಾವಾ ಸಂಖ್ಯೆ: **40/2015**ರ ವಿವಾದಾಂಶ**-6** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**32.** <u>ಅಸಲು ದಾವಾ ಸಂಖ್ಯೆ: **37/2015** ರಿಂದ **39/2015**ರ ವಿವಾದಾಂಶ**-4** ಹಾಗೂ ಅಸಲು ದಾವಾ ಸಂಖ್ಯೆ: **40/2015** ರ ವಿವಾದಾಂಶ**:7:-**</u> ಈ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳಿಗಾಗಿ ಈ ಕೆಳಗಿನ ರೀತಿ ಆದೇಶ ಮಾಡಲಾಗಿದೆ.

**:: ಆದೇಶ ::**

ಅಸಲು ದಾವಾ ಸಂಖ್ಯೆ: **37/2015** ರಿಂದ **40/2015** ರ ವಾದಿಗಳು ದಾವಾ ಅನುಸೂಚಿ ಸ್ವತ್ತಿನ ಮಾಲೀಕತ್ವದ ಹಕ್ಕು ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿರುವ ದಾವೆಗಳನ್ನು ಖರ್ಚು ಸಹಿತ ವಜಾ ಮಾಡಲಾಗಿದೆ.

ತೀರ್ಪಿನ ಮೂಲ ಪ್ರತಿಯನ್ನು ಅಸಲು ದಾವಾ ಸಂಖ್ಯೆ: **37/2015**ರಲ್ಲಿ ಇಡತಕ್ಕದ್ದು. ನಕಲುಗಳನ್ನು ಅಸಲು ದಾವಾ ಸಂಖ್ಯೆ: **38/2015** ರಿಂದ **40/2015** ರಲ್ಲಿ ಇಡತಕ್ಕದ್ದು.

ಮೇಲಿನ ರೀತಿ ಡಿಕ್ರಿ ಬರೆಯುವುದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನಕೊಟ್ಟು ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಂತರ ಪರಿಶೀಲಿಸಿ, ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ **15**ನೇ ಜೂನ್-**2026**ರಂದು ಘೋಷಿಸಲಾಗಿದೆ.)

(ಶ್ರೀಮತಿ ಹರಿಣಿ ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.

**::ಅನುಬಂಧ ::**

**1.** ವಾದಿಯರ ಪರ ಸಾಕ್ಷಿಗಳ ವಿವರ:

| | | |
|---|---|---|
| ಪಿಡಬ್ಲ್ಯೂ-1 | : | ಶ್ರೀ. ಹೆಚ್. ಎನ್. ಮಹಾಲಿಂಗ. |
| ಪಿಡಬ್ಲ್ಯೂ-2 | : | ಶ್ರೀ. ರಾಜು. |
| ಪಿಡಬ್ಲ್ಯೂ-3 | : | ಶ್ರೀ. ಶಿವನಂಜೇಗೌಡ. |
| ಪಿಡಬ್ಲ್ಯೂ-4 | : | ಶ್ರೀ. ಶಿವರಾಜು ಹೆಚ್.ಆರ್. |
| ಪಿಡಬ್ಲ್ಯೂ-5 | : | ಶ್ರೀ. ಸಂತೋಷ್ ಹೆಚ್.ಎನ್. |
| ಪಿಡಬ್ಲ್ಯೂ-6 | : | ಶ್ರೀ. ಪುಟ್ಟಸ್ವಾಮಿ. |
| ಪಿಡಬ್ಲ್ಯೂ-7 | : | ಶ್ರೀ. ರಮೇಶ. |

**2.** ವಾದಿಯ ಪರ ಹಾಜರುಪಡಿಸಿದ ದಾಖಲೆಗಳ ವಿವರ:

| | | |
|---|---|---|
| ನಿಪಿ-1 | : | ರೀಸರ್ವೆ ಟಿಪ್ಪಣಿಯ ನಕಲು. |
| ನಿಪಿ-1(a) | : | ರೀಸರ್ವೆ ಟಿಪ್ಪಣಿಯ ಅನುವಾದ. |
| ನಿಪಿ-2 & 2(a) | : | ನೋಂದಾಯಿತ ಪಾಲು ವಿಭಾಗ ಪತ್ರದ ದೃಢೀಕೃತ ಮತ್ತು ಅನುಧಾನ. |
| ನಿಪಿ-3 to 5 | : | 3 ಕ್ರಯಪತ್ರ. |
| ನಿಪಿ-6 | : | ಕಂದಾಯ ಪಾವತಿ ರಶೀದಿ. |
| ನಿಪಿ-7 | : | ಋಣಭಾರ ಪ್ರಮಾಣ ಪತ್ರದ ದೃಢೀಕೃತ ನಕಲು. |
| ನಿಪಿ-8 & 8(a) | : | ದಿನಾಂಕ 04.10.1915 ರ ಬೋಗ್ಯಪತ್ರದ ದೃಢೀಕೃತ ನಕಲು ಮತ್ತು ಅನುಧಾನ. |
| ನಿಪಿ-9 & 9(a) | : | ದಿನಾಂಕ 21.12.1923 ರ ಕ್ರಯಪತ್ರದ ದೃಢೀಕೃತ ನಕಲು ಮತ್ತು ಅನುಧಾನ. |
| ನಿಪಿ-10 & 11 | : | ಆರ್.ಟಿ.ಸಿ.ಗಳು. |
| ನಿಪಿ-12 | : | ಡಿ.ಸಿ. |
| ನಿಪಿ-13 | : | ಸರ್ವೆ ನಂ.7 ರ ಆರ್.ಆರ್. ದೃಢೀಕೃತ ನಕಲು. |
| ನಿಪಿ-14 to 18 | : | ಸರ್ವೆ ನಂ. 7 ರ ಆರ್.ಟಿ.ಸಿ. ಗಳು. |
| ನಿಪಿ-19 | : | ಆರ್.ಟಿ.ಸಿ. |
| ನಿಪಿ-20 | : | ಟಿಪ್ಪಣಿ ಕಾಪಿಯ ದೃಢೀಕೃತ ನಕಲು. |
| ನಿಪಿ-20(a) | : | ಟಿಪ್ಪಣಿ ಕಾಪಿಯ ಬೆರಳಚ್ಚು ಮಾಡಿದ ನಕಲಿನ ದೃಢೀಕೃತ ನಕಲು. |
| ನಿಪಿ-21 | : | ದಿನಾಂಕ 25.06.1902 ರ ವಿಭಾಗ ಪತ್ರದ ದೃಢೀಕೃತನಕಲು. |
| ನಿಪಿ-21(a) | : | ದಿನಾಂಕ 25.06.1902 ರ ಬೆರಳಚ್ಚು ಮಾಡಿದ ದೃಢೀಕೃತ ನಕಲು. |
| ನಿಪಿ-22 | : | ದಿನಾಂಕ 02.11.1905 ರ ಕ್ರಯಪತ್ರದ ದೃಢೀಕೃತ ನಕಲು. |
| ನಿಪಿ-23 | : | ದಿನಾಂಕ 16.02.1906 ರ ಖರೀದಿ ಪತ್ರದ ದೃಢೀಕೃತ ನಕಲು. |
| ನಿಪಿ-24 | : | 1947 ರ ಕ್ರಯಪತ್ರದ ದೃಢೀಕೃತ ನಕಲು. |
| ನಿಪಿ-25 | : | ಕಂದಾಯ ರಶೀದಿಯ ದೃಢೀಕೃತ ನಕಲು. |
| ನಿಪಿ-26 | : | ಇ.ಸಿ. |
| ನಿಪಿ-27 & 27(a) | : | ಭೋಗ್ಯಪತ್ರದ ದೃಢೀಕೃತ ನಕಲು. ಮತ್ತು ಬೆರಳಚ್ಚು ಪ್ರತಿ. |
| ನಿಪಿ-28 & 28(a) | : | ಖರೀದಿ ಪತ್ರದ ಮತ್ತು ಬೆರಳಚು ಪ್ರತಿಯ ದೃಢೀಕೃತ ನಕಲು. |
| ನಿಪಿ-29 | : | ಆರ್.ಟಿ.ಸಿ. |
| ನಿಪಿ-30 | : | ಆರ್.ಆರ್. ನಕಲಿನ ದೃಢೀಕೃತ ನಕಲು. |
| ನಿಪಿ-31 to 37 | : | ಆರ್.ಟಿ.ಸಿ. ಗಳು. |
| ನಿಪಿ-38 | : | ಅಧಿಕಾರ ಪತ್ರ. |

| | | |
|---|---|---|
| ನಿಪಿ-39 | : | ಆರ್.ಟಿ.ಸಿ. |
| ನಿಪಿ-40 | : | ಟಿಪ್ಪಣಿ ಕಾಪಿಯ ದೃಢೀಕೃತ ನಕಲು. |
| ನಿಪಿ-40(a) | : | ಟಿಪ್ಪಣಿ ಕಾಪಿಯ ಬೆರಳಚ್ಚು ನಕಲು. |
| ನಿಪಿ-41 | : | ವಿಭಾಗ ಪತ್ರದ ದೃಢೀಕೃತ ನಕಲು. |
| ನಿಪಿ-41(a) | : | ವಿಭಾಗ ಪತ್ರದ ಬೆರಳಚ್ಚು ನಕಲು. |
| ನಿಪಿ-42 & 43 | : | ಕ್ರಯಪತ್ರದ ದೃಢೀಕೃತ ನಕಲು. |
| ನಿಪಿ-44 | : | 1947 ರ ಕ್ರಯಪತ್ರದ ದೃಢೀಕೃತ ನಕಲು. |
| ನಿಪಿ-45 | : | 23 ಕಂದಾಯ ರಶೀದಿಗಳ ದೃಢೀಕೃತ ನಕಲು. |
| ನಿಪಿ-46 | : | 1902-1907 ರ ಇ.ಸಿ. |
| ನಿಪಿ-47 & 47(a) | : | ಭೋಗ್ಯ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ನಕಲು. |
| ನಿಪಿ-48 & 48(a) | : | 21.12.1923 ರ ಖರೀದಿ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಪ್ರತಿ. |
| ನಿಪಿ-49 | : | 2014-15 ನೇ ಸಾಲಿನ ಆರ್.ಟಿ.ಸಿ. |
| ನಿಪಿ-50 | : | ಸರ್ವೆ ನಂ.7 ರ ಆರ್.ಆರ್.ನ ದೃಢೀಕೃತ ನಕಲು. |
| ನಿಪಿ-51 to 58 | : | ಆರ್.ಟಿ.ಸಿ.ಗಳು. |
| ನಿಪಿ-59 &59(a) | : | ರಿ-ಸರ್ವೆಯ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಪಿ-60 & 60(a) | : | ಪಾಲುಪಟ್ಟಿಯ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಪಿ- 61 to 63 | : | ಕ್ರಯಪತ್ರದ ದೃಢೀಕೃತ ನಕಲು. |
| ನಿಪಿ-64 | : | ಕಂದಾಯ ರಶೀದಿಗಳು. |
| ನಿಪಿ-65 | : | ಇ.ಸಿ. ಯ ದೃಢೀಕೃತ ನಕಲು. |
| ನಿಪಿ-66 & 66(a) | : | ಭೋಗ್ಯಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಪಿ-67 & 67(a) | : | ಕ್ರಯಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಪಿ-68 to 73 | : | ಆರ್.ಟಿ.ಸಿ.ಗಳು. |

**3.** ಪ್ರತಿವಾದಿಯರ ಪರ ಸಾಕ್ಷಿಗಳ ವಿವರ:

| | | |
|---|---|---|
| ಡಿಡಬ್ಲೂ-1 | : | ಶ್ರೀ. ಪುಟ್ಟಸ್ವಾಮಿ. |
| ಡಿಡಬ್ಲೂ-2 | : | ಶ್ರೀ. ರಮೇಶ. |
| ಡಿಡಬ್ಲೂ-3 | : | ಶ್ರೀ. ಶಿವರಾಜು. |
| ಡಿಡಬ್ಲೂ-4 | : | ಶ್ರೀ. ನಂಜಪ್ಪ. |
| ಡಿಡಬ್ಲೂ-5 | : | ಶ್ರೀ. ನಂಜ. |
| ಡಿಡಬ್ಲೂ-6 | : | ಶ್ರೀ. ಮಂಜುನಾಥ್ ಗೌಡ. |

**4. ಪ್ರತಿವಾದಿಯರ ಪರ ಹಾಜರುಪಡಿಸಿದ ದಾಖಲೆಗಳ ವಿವರ:-**

| | | |
|---|---|---|
| ನಿಡಿ-**1** | : | ಗ್ರಾಮದ ನಕ್ಷೆ. |
| ನಿಡಿ-**1 (a to c)** | : | ಸರ್ವೆ ನಂ. **5** ಮತ್ತು **7.** |
| ನಿಡಿ-**2 & 2(a)** | : | ಕ್ರಯ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ |
| ನಿಡಿ-**3 & 4** | : | ಕ್ರಯಪತ್ರದ ನಕಲು. |
| ನಿಡಿ-**3(a) to 4(a)** | : | ಕ್ರಯ ಪತ್ರದ ಬೆರಳಚ್ಚು ಕಾಪಿ |
| ನಿಡಿ-**5 & 5(a)** | : | ದತ್ತು ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ |
| ನಿಡಿ-**6 to 8** | : | 05.07.1965 ಕ್ರಯ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ |
| ನಿಡಿ-**9 & 9(a)** | : | 10.03.1970 ವಿಭಾಗ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ |
| ನಿಡಿ-**10** | : | 10.05.2001 ತಹಶೀಲ್ದಾರ್ ಅವರ ಆದೇಶದ ದೃಢೀಕೃತ ನಕಲು |
| ನಿಡಿ-**11** | : | WP 43143/2001 ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ಆದೇಶದ ದೃಢೀಕೃತ ನಕಲು. |
| ನಿಡಿ-**12** | : | ಎ.ಸಿ ನ್ಯಾಯಾಲಯ ಮಾಡಿರುವ ಆದೇಶದ ದೃಢೀಕೃತ ನಕಲ |
| ನಿಡಿ-**13** | : | WP 13147-150/2012 ನಲ್ಲಿ ಮಾನ್ಯ ಉಚ್ಛ ನ್ಯಾಯಾಲಯ ನೀಡಿದ ಆದೇಶದ ದೃಢೀಕೃತ ನಕಲು |
| ನಿಡಿ-**14 & 15** | : | ಜಿಲ್ಲಾಧಿಕಾರಿ ಮಾಡಿರುವ ಆದೇಶದ 2 ದೃಢೀಕೃತ ನಕಲು |
| ನಿಡಿ-**16** | : | ಸರ್ವೆ ನಕ್ಷೆಯ ದೃಢೀಕೃತ ನಕಲು. |
| ನಿಡಿ-**17** | : | ಆಕಾರ್ ಬಂದ್ ದೃಢೀಕೃತ ನಕಲು. |
| ನಿಡಿ-**18** | : | ಗ್ರಾಮ ನಕ್ಷೆಯ ದೃಢೀಕೃತ ನಕಲು. |
| ನಿಡಿ-**19** | : | Index of Land ದೃಢೀಕೃತ ನಕಲು. |
| ನಿಡಿ-**20** | : | Record of rights ದೃಢೀಕೃತ ನಕಲು. |
| ನಿಡಿ-**21** | : | Index of Land ದೃಢೀಕೃತ ನಕಲು. |
| ನಿಡಿ-**22 to 30** | : | 9 ಆರ್.ಟಿ.ಸಿಗಳ ದೃಢೀಕೃತ ನಕಲು. |
| ನಿಡಿ-**31** | : | ಹಿಸ್ಸಾ ದಾಖಲೆಯ ದೃಢೀಕೃತ ನಕಲು. |
| ನಿಡಿ-**32 to 37** | : | ಹಿಸ್ಸಾ ದಾಖಲೆಯ ದೃಢೀಕೃತ ನಕಲು. |
| ನಿಡಿ-**38** | : | ಎಂ.ಆರ್. ಎಕ್ಸ್‌ಟ್ರಾಕ್ಟ್. |
| ನಿಡಿ-**39** | : | **Revision Settlement** ಆಕಾರ್ ಬಂದ್. |
| ನಿಡಿ-**40** | : | ಆಕಾರ್ ಬಂದ್ ನ ದೃಢೀಕೃತ ನಕಲು. |

| | | |
|---|---|---|
| ನಿಡಿ-41 | : | ಆರ್.ಟಿ.ಸಿ. |
| ನಿಡಿ-42 to 43 | : | Revision Settlement ಆಕಾರ್ ಬಂದ್. |
| ನಿಡಿ-44 to 46 | : | ಆರ್.ಟಿ.ಸಿ.ಗಳು. |
| ನಿಡಿ-47 | : | ಎಂ.ಆರ್. ಎಕ್ಸ್‌ಟ್ರಾಕ್ಟ್. |
| ನಿಡಿ-48 & 48(a) | : | ಕ್ರಯ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಡಿ-49 & 49(a) | : | ಕ್ರಯ ಪತ್ರದ ದೃಢೀಕೃತ ನಕಲು ಮತ್ತು ಬೆರಳಚ್ಚು ಕಾಪಿ. |
| ನಿಡಿ-50 | : | ಸರ್ವೆ ನಕ್ಷೆ. |
| ನಿಡಿ-51 | : | ಹಿಸ್ಸಾ ಟಿಪ್ಪಣಿಯ ದೃಢೀಕೃತ ನಕಲು. |
| ನಿಡಿ-52 | : | ಪಕ್ಕಾ ಬುಕ್. |
| ನಿಡಿ-53 | : | ಪಸಲು ಪಹಣಿಯದೃಢೀಕೃತ ನಕಲು. |
| ನಿಡಿ-54 | : | Revision Settlement ಆಕಾರ್ ಬಂದ್. |
| ನಿಡಿ-55 & 56 | : | ಆರ್.ಟಿ.ಸಿ.ಗಳು. |
| ನಿಡಿ-57 | : | ಎಂ.ಆರ್. ಎಕ್ಸ್‌ಟ್ರಾಕ್ಟ್. |
| ನಿಡಿ-58 | : | ಪಟ್ಟಾ ಪುಸ್ತಕ. |
| ನಿಡಿ-59 to 61 | : | ಅಂಚೇ ರಶೀದಿ. |
| ನಿಡಿ-62 | : | Kardha ದೃಢೀಕೃತ ನಕಲು. |
| ನಿಡಿ-63 | : | Income Tax Returns. |
| ನಿಡಿ-64 | : | ಪರಿಹಾರ ನೀಡಿರುವ ಬಗ್ಗೆ ಆನ್ ಲೈನ್ ದಾಖಲೆ. |
| ನಿಡಿ-65 | : | ಬ್ಯಾಂಕ್ ಅಂಕಿ-ಅಂಶಗಳು. |
| ನಿಡಿ-66 & 67 | : | ಹಿಸ್ಸಾ ಪೋಡ್. |
| ನಿಡಿ-68 & 68(a) | : | ಸರ್ವೆ ನಂ. 7 ರ Classification ಟಿಪ್ಪಣಿ. |
| ನಿಡಿ-69 | : | ರಿಸರ್ವೆ ನಂ. 6 ರ Classification ಟಿಪ್ಪಣಿ. |
| ನಿಡಿ-70 | : | ಸರ್ವೆ ನಂ. 7 ರ ಎಕ್ಸ್‌ಟ್ರಾಕ್ಟ್‌ನ ದೃಢೀಕೃತ ನಕಲು. |
| ನಿಡಿ-71 | : | ಕಂದಾಯ ಪಾವತಿ ರಶೀದಿ. |
| ನಿಡಿ-72 | : | ಸರ್ವೆ ನಂ. 6 ಮತ್ತು 7 ಎಕ್ಸ್‌ಟ್ರಾಕ್ಟ್‌ನ ದೃಢೀಕೃತ ನಕಲು. |
| ನಿಡಿ-73 | : | 2021-22 ನೇ ಸಾಲಿನ ಆರ್.ಟಿ.ಸಿ. |
| ನಿಡಿ-74 | : | ದಿನಾಂಕ 20.05.1967 ರ ಕ್ರಯಪತ್ರದ ದೃಢೀಕೃತ ನಕಲು. |
| ನಿಡಿ-75 & 76 | : | ಎಂ.ಆರ್. 47/1966-67 ಮತ್ತು ಎಂ.ಆರ್.12-ಹೆಚ್-15-16 |
| ನಿಡಿ-77 | : | ಸರ್ವೆ ನಂ. 7/1 ರ ಆರ್.ಟಿ.ಸಿ. |
| ನಿಡಿ-78 | : | ಬ್ಯಾಂಕ್ ಪಾಸ್ ಪುಸ್ತಕ. |
| ನಿಡಿ-79 | : | ಆನ್ ಲೈನ್ ಪೇಮೆಂಟ್. |

| | | |
|---|---|---|
| ನಿಡಿ-**80** | : | **05.07.1965** ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲು**.** |
| ನಿಡಿ-**81** | : | ಎಂ**.**ಆರ್ **1/90/1965-66** |
| ನಿಡಿ-**82** | : | ಸರ್ವೆ ನಂ**. 7/1** ರ ಆರ್**.**ಟಿ**.**ಸಿ**.** |
| ನಿಡಿ-**83** | : | ಪಟ್ಟಾ ಪುಸ್ತಕ**.** |
| ನಿಡಿ-**84** | : | ಸರ್ವೆ ನಂ**. 8/2** ರ ಆರ್**.**ಟಿ**.**ಸಿ**.** |

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.